Motamakalahalli Forest (Cultivation of lands)

Q.—1014. **Sri M. C. ANJANEYA REDDY** (Chintamani).—

Will the Government be pleased to state:—

(*a*) whether the lands of Motamakalahalli Forest, Chilakalanerpu Hobli, Chintamani Taluk, have been given to raiyats for cultivation;

(*b*) whether they intend to take them back;

(*c*) whether it is a fact that survey of those lands is being conducted; the object of conducting the survey;

(*d*) whether there is a scheme to include those cultivable lands to the forest after taking them away from the raiyats?

A.—**Dr. R. NAGAN GOWDA** (Minister for Agriculture).—

(*a*) No lands have been granted by the Forest Department in Motamakalahalli Forest.

(*b*) Unauthorised cultivations in State Forests have naturally to be resisted and areas resumed to the department.

(*c*) Yes. To correctly fix up the extent of encroachment and unauthorised cultivation inside the State Forest.

(*d*) This question does not arise in view of the answers to (*a*) and (*b*) *supra*.

Hadbust Fee

Q.—1019. **Sri M. C. ANJANEYA REDDY** (Chintamani).—

Will the Government be pleased to state:—

(*a*) whether it is a fact that the phode fee is enhanced to Rs. 5 from Rs. 3 during the time of registering the documents;

(*b*) the reason for the same;

(*c*) the percentage of phode that is being done out of the amount so collected?

A.—**Sri Kadidal MANJAPPA** (Minister for Revenue and Public Works).—

(*a*) The phode fee deposited during the time of registering of documents is called Mutation fee paid for the subdivision of a hissa. This fee is Rs.3 for a hissa and it is not raised. It is reduced to Rs. 2 per hissa where not less than six hissas are involved.

The fee which is raised from Rs. 3 to Rs. 5 is the fee prescribed for showing the hadbust of a survey number or a hissa by a Surveyor.

(*b*) and (*c*) Do not arise in view of replies to (*a*).

BUDGET FOR 1954-55—DEMANDS FOR GRANTS.

Mr. SPEAKER.—I have fixed time for demands for to-day as follows:—

Demand No. 29	Till 11-30
Demand No. 30	11-30 to 11-45
Demand No. 33	11-45 to 12
Demand No. 34	12 to 12-15
Demand No. 35A	12-15 to 12-30

DEMAND No. 29—CIVIL WORKS

50. CIVIL WORKS.

Mr. SPEAKER.—Motion moved:

"That a sum not exceeding Rs. 3,14,82,943 be granted to the Government to defray the charges which will come in course of payment during the year ending 31st day of March 1955 in respect of 'Civil Works'."

The same procedure as we have been following for the past two or three days will be followed now also.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಸಿವಿಲ್ ಇಲಾಖೆಯ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಹೇಳಬೇಕಾದರೆ, ವ್ಯಯದ ವಿಚಾರದಲ್ಲಿ ವ್ಯಯವನ್ನು ಕಡಿಮೆಮಾಡಿಕೊಳ್ಳುವುದಕ್ಕೆ ಅವಕಾಶವಿದೆಯೆಂದು ಹೇಳಲು ಇಷ್ಟಪಡುತ್ತೇನೆ. ಈಗಾಗಲೇ ಎಸ್ಟಿಮೇಟ್ ಸಮಿತಿಯವರು ಒಂದು ಸಲಹೆಯನ್ನು ಸರ್ಕಾರದವರ ಗಮನಕ್ಕೆ ತಂದಿರುತ್ತಾರೆ. ಈ ದಿನ ತಾಲ್ಲೂಕಿಗೆ 5-6 ಮಂದಿ ಸಬ್ ಓವರ್‌ಸೀಯರ್ಸ್, ಒಬ್ಬರು ಸೂಪರ್‌ವೈಜರ್, ಒಬ್ಬರು ಸ್ಟೇಟ್ ಇಂಜಿನಿಯರ್, ಒಬ್ಬರು ಅಸಿಸ್ಟೆಂಟ್ ಇಂಜಿನಿಯರು ಇದ್ದಾರೆ. ಈ ರೀತಿ ನೇಮಕಮಾಡಿರುವುದರ ಉದ್ದೇಶವಾದರೂ Rural Development ಕಾರ್ಯ ಯಶಸ್ವಿಯಾಗಿ

* Asterisk indicates that the speech has not been revised by the Member concerned.

(ಶ್ರೀ ಯು. ಎಂ. ಮಾದಪ್ಪ.)

ನಡೆಯಬೇಕೆಂದು. ಇದಕ್ಕಾಗಿ Rural Development Board ಬೇರೆ ಇದೆ. ಈದಿನ ಇವೆಲ್ಲಾ ಸರ್ಕಾರಕ್ಕೆ ಒಂದು ಹೊರೆಯಾಗಿ ಪರಿಣಮಿಸಿವೆ. ಇವರು ಮಾಡಬೇಕಾದ ಕೆಲಸದ ಜವಾಬ್ದಾರಿಯನ್ನು ಅರಿತು ವರ್ತಿಸುತ್ತಿಲ್ಲ. ಯಾವ ಯಾವ ಗ್ರಾಮದಲ್ಲಿ ಅತ್ಯವಶ್ಯಕವಾಗಿ ಆಗಬೇಕಾದ ಕೆಲಸವೇನು ಎಂಬ ಬಗ್ಗೆ ಪಟ್ಟಿಯನ್ನು ತಯಾರುಮಾಡಿ, ಅವುಗಳ ಬಗ್ಗೆ ಅಂದಾಜು ತಯಾರುಮಾಡಿ, ಅದನ್ನು ಇವರು ಸರ್ಕಾರಕ್ಕೆ ಸಲ್ಲಿಸಬೇಕು. ಈ ವಿಚಾರದಲ್ಲಿ ನಾನು ಪ್ರಶ್ನಿಸಿದಾಗ, ಆ ಇಲಾಖೆಯವರು ಸರ್ಕಾರದಲ್ಲಿ ಹಣವಿದೆಯೋ ಅಥವಾ ಇಲ್ಲವೋ, ಸುಮ್ಮನೆ ಅಂದಾಜು ತಯಾರುಮಾಡಿ ಏಕೆ ಕಷ್ಟಪಡಬೇಕು ಎಂಬ ತಾತ್ಸಾರಮನೋಭಾವನೆಯನ್ನು ವ್ಯಕ್ತಪಡಿಸಿರುವುದು ನನಗೆ ಗೋಚರವಾಗಿದೆ. ಅವರ ಕರ್ತವ್ಯವನ್ನು ಅವರು ಅರಿತು, ಅಂದಾಜು ತಯಾರುಮಾಡಿ ಸರ್ಕಾರಕ್ಕೆ ಕಳುಹಿಸಬೇಕು. ಅದನ್ನು ಒಪ್ಪುವುದು ಅಥವಾ ಬಿಡುವುದು ಸರ್ಕಾರಕ್ಕೆ ಸೇರಿದ್ದು. ಈಬಗ್ಗೆ ಇವರು ಈದಿನ ಅನುಸರಿಸುತ್ತಿರುವ ನೀತಿಯನ್ನು ಬದಲಾಯಿಸಬೇಕಾಗಿದೆ. ಹಾಗಿಲ್ಲದಿದ್ದರೆ ಈ Rural Development ಕಾರ್ಯವನ್ನು ಸರ್ಕಾರದವರೇ ನೇರವಾಗಿ ವಹಿಸಿಕೊಂಡು ಅವರ ಮುಂದಾಳತ್ವದಲ್ಲಿ ಈ ಕಾರ್ಯವನ್ನು ಕೈಗೊಳ್ಳುವ ವ್ಯವಸ್ಥೆಮಾಡಬೇಕು. ಈಗಿರುವ ಸ್ಥಿತಿಯಲ್ಲಿ ಗ್ರಾಮಾಂತರಗಳಲ್ಲಿ ಈಗಿನ ವ್ಯವಸ್ಥೆ ಒಂದು show ಆಗಿ ಪರಿಣಮಿಸಿದೆಯೇ ಹೊರತು ಕೆಲಸವೇನೂ ಆಗುತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮುಜರಾಯಿ ಶಾಖೆಗಳ ಮಂತ್ರಿಗಳು).—ಯಾವ ಕೆಲಸವೂ ಆಗುತ್ತಿಲ್ಲವೆಂದು ತಾವು ಹೇಳುವುದು ಸರಿಯಾಗಿಲ್ಲ.

ಶ್ರೀ ಯು. ಎಂ. ಮಾದಪ್ಪ.—ನಿರೀಕ್ಷಣೆಮಾಡಿದಷ್ಟು ಮಟ್ಟಿಗೆ ಕೆಲಸವಾಗುತ್ತಿಲ್ಲ. ಯಾವ ಉದ್ದೇಶದಿಂದ ಈ ರೀತಿ ವ್ಯವಸ್ಥೆಯನ್ನು ಸರ್ಕಾರದವರು ಏರ್ಪಡಿಸಿದರೋ ಆ ಉದ್ದೇಶಸಾಧನೆ ಆಗುತ್ತಿಲ್ಲ. ಸಾಲದುದಕ್ಕೆ ಖರ್ಚಿನ ಬಾಬು ವಿಪರೀತವಾಗಿದೆ. ಇದನ್ನು ತಗ್ಗಿಸಬೇಕಾದರೆ ಎರಡು ತಾಲ್ಲೂಕುಗಳನ್ನೂ ಸೇರಿಸಿ ಒಂದು P.W.D. ಇಲಾಖೆ ಸೆಕ್ಷನ್‌ಗೆ ವಹಿಸಿದ್ದರೆ ಚೆನ್ನಾಗಿತ್ತು. ಸರ್ಕಾರಕ್ಕೆ ಹಣದ ಮುಗ್ಗಟ್ಟು ಇರುವಾಗ ಇಷ್ಟೊಂದು ಸಿಬ್ಬಂದಿ ಖರ್ಚನ್ನು ಇಟ್ಟುಕೊಂಡಿರುವುದು ಸೂಕ್ತವಾದುದಲ್ಲ. ಈ ವಿಚಾರದಲ್ಲಿ ಎಸ್ಟಿಮೇಟ್ ಸಮಿತಿಯವರು ಕೊಟ್ಟಿರುವ ಸಲಹೆಗಳನ್ನು ಸರ್ಕಾರದವರು ಆದಷ್ಟು ಜಾಗ್ರತೆ ಕಾರ್ಯಗತಮಾಡುವುದು ಸೂಕ್ತವಾದುದೆಂದು ಒತ್ತಾಯಮಾಡುತ್ತೇನೆ.

ಇನ್ನು ಸರ್ಕಾರದ ನೀತಿನಿಯಮಗಳನ್ನು ಈ ದಿನ ಖಂಡನೆಮಾಡುವುದು ಸಾಧುವಾದುದಲ್ಲ. ಆದರೂ distribution ಮಾಡುವಾಗ ಒಂದೊಂದು ಡಿಸ್ಟ್ರಿಕ್ಟ್‌ಗೆ ಒಂದೊಂದು ರೀತಿ ಇರುತ್ತದೆ. ಈ ವಿಚಾರದಲ್ಲಿ ಇಲಾಖೆಯವರದೇ ತಪ್ಪೋ ಸರ್ಕಾರದವರದೇ ತಪ್ಪೋ ಎಂಬುದನ್ನು ವಿಮರ್ಶಿಸಿ, ಯಾವ ಯಾವ ಡಿಸ್ಟ್ರಿಕ್ಟ್‌ಗೆ ಎಷ್ಟು ಅಗತ್ಯ, ಅವಶ್ಯಕವಾಗಿ ಕಾರ್ಯ ಎಲ್ಲಿ ಆಗಬೇಕು ಎಂಬುದನ್ನು ಗಣನೆಗೆ ತೆಗೆದುಕೊಂಡು ವರ್ತಿಸಬೇಕಾದುದು ಅತ್ಯಗತ್ಯ. ಈಗ ಯಾವುದಾದರೂ ತುರ್ತಿನ ಕೆಲಸವಾಗಬೇಕಾದ ಸಂದರ್ಭದಲ್ಲಿ ಇಲಾಖೆಯವರನ್ನು ಪ್ರಶ್ನಿಸಿದರೆ ಅವರು ಹಣವೇ ಬಂದಿಲ್ಲವೆಂದು ಹೇಳುತ್ತಾರೆ. ಈ ವಿಚಾರದಲ್ಲಿ ಯಾರನ್ನು ನಂಬಬೇಕು, ಯಾರನ್ನು ಬಿಡಬೇಕು ಎಂಬುದು ಅರ್ಥವಾಗುತ್ತಿಲ್ಲ. ಇಂಥ ವಿಚಾರದಲ್ಲಿ ಸರ್ವತೋಮುಖವಾದ ಬೆಳವಣಿಗೆಗೆ ಅವಕಾಶವಿರಬೇಕೇ ವಿನಾ, ಪಕ್ಷೀಯ ಮನೋಭಾವನೆಯಮೇಲೆ ಮುಂದುವರಿದರೆ ಅಡಚಣೆಯಾಗುತ್ತದೆಂದು ಭಾವಿಸುತ್ತೇನೆ. ಉದಾಹರಣೆಯಾಗಿ, ಮೈಸೂರು ಜಿಲ್ಲೆಯ ನಂಜನಗೂಡು ಸಬ್‌ಡಿವಿಜನ್ನಿಗೆ ಈ ಹಂಚಿಕೆಯ ವ್ಯವಸ್ಥೆ ಯಾವರೀತಿ ಆಗಿರುತ್ತದೆಂಬುದನ್ನು ಪರಿಶೀಲಿಸಿದರೆ ಇದು ತಮಗೇ ವೇದ್ಯವಾಗುತ್ತದೆ

ರಸ್ತೆ ಕಾಮಗಾರಿಗಳ ವಿಚಾರದಲ್ಲಿ ಕೆಲವು ರಸ್ತೆಗಳು ಬಹಳ ಅವ್ಯವಸ್ಥೆಯಲ್ಲಿರುವುದು ಕಂಡುಬರುತ್ತಿದೆ. ಚಾಮರಾಜನಗರ—ಟೀ.-ನರಸೀಪುರದಕಡೆ ರಸ್ತೆಯಲ್ಲಿ ಹೇಗೆ Government Buses ಓಡಾಡುತ್ತಿವೆಯೋ ಅರ್ಥವಾಗುತ್ತಿಲ್ಲ. ಇದೇ ರೀತಿ ಯಳಂದೂರು ಕಡೆ ಹೋಗುವ ರಸ್ತೆಯೂ ಇದೆ. ನಂಜನಗೂಡು—ಮೈಸೂರು ರಸ್ತೆಯೊಂದನ್ನು ಬಿಟ್ಟರೆ ಬಾಕಿ ರಸ್ತೆಗಳೆಲ್ಲ ಹೀಗೆಯೇ ಇವೆ.

ಈ ರೀತಿ ಒಂದಲ್ಲ, ರಸ್ತೆ ವಿಷಯ, ಕೆರೆಗಳ ವಿಷಯ ಎಲ್ಲದರಲ್ಲೂ ಸಹ ಸರಿಯಾದ ನಿಗಾ ಕೊಟ್ಟಿಲ್ಲ. ನಂಜನಗೂಡು ಸಬ್‌ಡಿವಿಜನ್ನಲ್ಲಿ ಎಷ್ಟೋ ಕೆರೆಗಳಿವೆ. ಇವೊತ್ತಿನದಿವಸ ಸಾರ್ವತ್ರಿಕ ಚುನಾವಣೆ ಆದಮೇಲೆ ಎಷ್ಟು ಕೆರೆಗಳು ರಿಪೇರಿ ಆಗಿವೆ ಎಂಬ ಲೆಕ್ಕವನ್ನು ತಾವು ಸ್ವಲ್ಪ ತೆಗೆದುಕೊಂಡು ನೋಡಿ. ಒಂದು ಕೆಲಸವನ್ನೂ ಸಹ ತೆಗೆದುಕೊಂಡಿಲ್ಲ. ಬ್ರೀಚ್ ಆದ ಕೆರೆಗಳು ಹಾಗೆಯೇ ಇವೆ. ಸಣ್ಣಪುಟ್ಟ ಕೆಲಸಗಳನ್ನೂ ಸಹ ಮಾಡಿಲ್ಲ. ಅದನ್ನು ಕೇಳಿದಾಗ 'ಸರಿಯಾದ ಎಸ್ಟಿಮೇಟು ಬರುತ್ತಾ ಇಲ್ಲ, ಕೊನೆ ತಾಲ್ಲೂಕು ಎಂದು ಅಷ್ಟು ನಿಗಾ ತೆಗೆದುಕೊಂಡಿಲ್ಲ' ಎಂದು ಅಲ್ಲಿರುವ ಕೆಲವರು ಹೇಳುತ್ತಾರೆ. ಇಲಾಖೆಯವರನ್ನು ಕೇಳಿದರೆ 'ಹಣ ಇಲ್ಲ, ಯಾವುದು ಕಳುಹಿಸಿದರೂ ವಾಪಸು ಬರುವುದೇ ಇಲ್ಲ' ಎಂದುಹೇಳುತ್ತಾರೆ. ಒಟ್ಟಿನ ಮೇಲೆ ಯಾವ ಯಾವ ರೀತಿ ಕೆಲಸ ಆಗುತ್ತಿದೆ ಎಂಬ ಬಗ್ಗೆ ತಾವು ಬಹಳ ನಿಗಾ ಕೊಟ್ಟು ಪ್ರೋಗ್ರೆಸ್ ರಿಪೋರ್ಟ್ ಆಗಾಗ್ಗೆ ತರಿಸಿಕೊಂಡು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆಯೇ ವಿನಾ ಮತ್ತೇನೂ ಅಲ್ಲ.

ರೆವೆನ್ಯೂ ಮಂತ್ರಿಗಳು ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಕಾಲದಲ್ಲಿ ಒಂದು ಗ್ರಾಮಕ್ಕೆ ಭೇಟಿ ಕೊಟ್ಟರು. ಆ ಸಂದರ್ಭದಲ್ಲಿ ಒಂದು foot-bridgeನ್ನು cart-bridge ಆಗಿ convert ಮಾಡಬೇಕೆಂದು ಕೇಳಿಕೊಂಡಾಗ ಆರೀತಿ ಮಾಡಿಸುತ್ತೇವೆ ಎಂದು ಒಪ್ಪಿಕೊಂಡರು; ಅವರ ಮಿನಿಟ್ ಬುಕ್‌ನಲ್ಲೂ ಸಹ ಬರೆದುಕೊಂಡರು. ಅಲ್ಲದೇ ಅಲ್ಲಿದ್ದ ಇಂಜಿನಿಯರಿಗೂ ಕೂಡ ಇನ್‌ಸ್ಟ್ರಕ್ಷನ್ ಕೊಟ್ಟರು. ಅದಾದಮೇಲೆ ಎಸ್ಟಿಮೇಟು ತಯಾರಾಗಿ ಕೆಲಸ ಶುರುವಾಗಿತ್ತು. ಆದರೆ ಏನು ಕಾರಣವೋ ಗೊತ್ತಿಲ್ಲ, ಈಚೆಗೆ ಆ ಕೆಲಸ ನಿಂತೇ ಹೋಗಿದೆ. ಕಾರಣ ಏನು ಎಂದು ಅಲ್ಲಿನ ಇಲಾಖೆಯವರನ್ನು ಕೇಳಿದರೆ 'ಮಂತ್ರಿಗಳವರಲ್ಲಿ ಹೇಳಿಕೊಂಡರಲ್ಲ ಅವರ ಹತ್ತಿರವೇ ಮಾಡಿಸಿಕೊಳ್ಳಿ' ಎಂದು ಹೇಳತಕ್ಕ ಒಂದು ಮನೋಭಾವ ಬಂದಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಹೇಳಿದ್ದರೆ ಯಾರು ಹೇಳಿದರು ಎಂಬುದನ್ನು ಏಕೆ ತಿಳಿಸಬಾರದು?

Mr. SPEAKER.—Why should you presume that and make much of it, Sri Madappa?

ಶ್ರೀ ಯು. ಎಂ. ಮಾದಪ್ಪ.—ಈ ರೀತಿ convert ಮಾಡಬೇಕೇ ಬೇಡವೇ ಎಂಬ ಬಗ್ಗೆ ರೆವೆನ್ಯೂ ಡಿಪಾರ್ಟ್‌ಮೆಂಟಿನವರ opinion ತೆಗೆದುಕೊಳ್ಳಬೇಕೆಂದು ತಿಳಿದುಬಂತು. ಇಂಥ ವಿಷಯಗಳಲ್ಲಿ ಟೆಕ್ನಿಕಲ್

ಡಿಪಾರ್ಟ್‌ಮೆಂಟ್ ಯಾವುದು ಇದೆಯೋ ಅದರ opinion ತೆಗೆದುಕೊಳ್ಳುವುದಕ್ಕೆ ಬದಲಾಗಿ ಈ ರೀತಿ ಕೇಳುತ್ತಾ ಇರುವುದು ಸಮಂಜಸವೇ ಎಂಬುದನ್ನು ಯೋಚನೆಮಾಡಬೇಕು. ಈ ವಿಷಯದಲ್ಲಿ ಒಂದು ಪತ್ರವನ್ನು ಡೆಪ್ಯುಟಿ ಕಮಿಷನರಿಗೂ, ಸಂಬಂಧಪಟ್ಟ ಇಲಾಖೆಯವರಿಗೂ ಬರೆದಿದ್ದೇವೆ. ಅಂತೂ ಈಗ ಆ ಕೆಲಸ ಆಗುತ್ತಾ ಇಲ್ಲ.

ಇದೇ ರೀತಿ ಅನೇಕ ದಿವಸಗಳ ಹಿಂದಿನಿಂದಲೂ ಎಂದರೆ ಸುಮಾರು 8-10 ವರ್ಷಗಳಿಂದಲೂ ಕೆಲವು ದೊಡ್ಡ ದೊಡ್ಡ ಸೇತುವೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳುತ್ತಾ ಇದ್ದೇವೆ. ಕೆಲವು ಕಡೆ 20-30 ಮೈಲಿ ಸುತ್ತಿಕೊಂಡು ಬರಬೇಕಾಗಿರತಕ್ಕ ದೂರವನ್ನು ಈ ಸೇತುವೆಗಳನ್ನು ಹಾಕುವುದರಿಂದ connect ಮಾಡಿ ಜನಗಳಿಗೆ ಅದರಲ್ಲೂರೈತಾಪಿ ವರ್ಗದವರಿಗೆ ಅನುಕೂಲಮಾಡಿಕೊಡಬೇಕಾದದ್ದು ಅತ್ಯವಶ್ಯಕವಾಗಿದೆ. ಇದನ್ನು ಈ ಮಾನ್ಯ ಸಭೆಯಲ್ಲೂ ಮತ್ತು ಸಾರ್ವಜನಿಕರೂ ಕೂಡ ಒತ್ತಾಯಮಾಡಿದ್ದಾರೆ. ಇಷ್ಟಾದರೂ ಸಹ ಇದಕ್ಕೆ ಸರ್ಕಾರದವರು ಗಮನಕೊಡದೇ ಇರುವುದು ಶೋಚನೀಯ. ಮುಂದಾದರೂ ಸಹ ಮಾನ್ಯ ಮಂತ್ರಿಗಳು ಗಮನಕೊಡುತ್ತಾರೆಂದು ನಂಬಿದ್ದೇನೆ.

ಇನ್ನು ಡಿಸ್ಪೆನ್ಸರಿಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನ್ಯೂ ಟೈಪ್ ಡಿಸ್ಪೆನ್ಸರಿ ಪ್ರಾರಂಭವಾಡಬೇಕೆಂದು ಹೇಳಿ ಅದರ ಕಟ್ಟಡಕ್ಕಾಗಿ ಅರಕಲವಾಡಿಯಲ್ಲಿ ಸಾರ್ವಜನಿಕರೊಬ್ಬರು ಡೊನೇಷನ್ ಕೊಟ್ಟಿದ್ದಾರೆ. ಡೊನೇಷನ್ ಕೊಟ್ಟು ಅವರು ಸತ್ತುಹೋಗಿ 4-5 ವರ್ಷಗಳಾದರೂ ಸಹ ಆ ಕಟ್ಟಡ ಇನ್ನೂ ಪೂರೈಸುವುದರಲ್ಲೇ ಇದೆ. ಡೊನೇಷನ್ ಕೊಟ್ಟವರು ತಾವು ಯಾವ ಉದ್ದೇಶದಿಂದ ಡೊನೇಷನ್ ಕೊಟ್ಟರೋ ಆ ಉದ್ದೇಶ ನೆರವೇರಿ ತಾವು ಸಾಯುವುದರೊಳಗೇ ತಮ್ಮ ಕಣ್ಣಾರ ಆ ಕಾರ್ಯ ಸಫಲವಾದದ್ದನ್ನು ನೋಡಬೇಕೆಂಬ ಆಶೆಯುಳ್ಳವರಾಗಿರುತ್ತಾರೆ. ಆದ್ದರಿಂದ ಅಂಥ ಕೆಲಸಕಾರ್ಯಗಳನ್ನು ತ್ವರಿತವಾಗಿ ಮಾಡಿಸಬೇಕು. ಆ ರೀತಿ ಮಾಡಿದರೆ ಸಾರ್ವಜನಿಕರಿಂದ ಡೊನೇಷನ್ ಬರುವುದಕ್ಕೆ ಅವಕಾಶವಾಗುತ್ತದೆ. ಇಲ್ಲದೇ ಇದ್ದರೆ ದುಡ್ಡುಕೊಟ್ಟೂ ಪ್ರಯೋಜನವಿಲ್ಲ, ಏಕೆ ಕೊಡಬೇಕು ಎಂದು ಹೇಳುತ್ತಾರೆ. ಇದಕ್ಕೆ ತಾವು ಸಾಕಾದಷ್ಟು ಗಮನ ಕೊಡಬೇಕೆಂದು ಹೇಳುತ್ತೇನೆ.

ಇಂಟರ್-ವಿಲೇಜ್ ಕಮ್ಯುನಿಕೇಷನ್ ರೋಡುಗಳ ವಿಚಾರ ಹೇಳಬೇಕೆಂದಿದ್ದೆ, ಕಾಲಾವಕಾಶವಿಲ್ಲವೇ ಇರುವುದರಿಂದ ಇಷ್ಟುಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ—ಹೆಗ್ಗಡದೇವನಕೋಟೆ).—ಸ್ವಾಮಿ, ಸಿವಿಲ್ ವರ್ಕ್ಸ್ ಸಂಬಂಧದಲ್ಲಿ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಅಪೇಕ್ಷೆಪಡುತ್ತೇನೆ. ಶ್ರೀಮಾನ್ ಮಾದಪ್ಪನವರು ಎಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಇಂತಕ್ಕ ಕುಂದುಕೊರತೆಗಳನ್ನು ಅರಿಕೆಮಾಡಿಕೊಂಡಿದ್ದಾರೆ. ಸ್ವಾಮಿ, ನಾನು ಪದೇಪದೇ ಇದೇ ಅಸೆಂಬ್ಲಿಯಲ್ಲಿ ನಮಗಿರತಕ್ಕ ಕುಂದುಕೊರತೆಗಳನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದರೂ ಸಹ ಅವನ್ನು ತಾತ್ಸಾರದಿಂದ ನೋಡುತ್ತಾ ಇರುವುದು ಶೋಚನೀಯವಾದ ವಿಚಾರ. ಕಳೆದ ಜನವರಿ ಅಧಿವೇಶನದಲ್ಲೇ ತಾವು ವಾಟರ್ ವರ್ಕ್ಸ್‌ಗೆ ಕೆಲವು ಮೊಬಲಗುಗಳನ್ನು ಒದಗಿಸುತ್ತೇವೆ ಎಂದು ಹೇಳಿದ್ದಿರಿ. ಆದರೆ ಆರೀತಿ ಒದಗಿಸಿಲ್ಲ, ಅದನ್ನು ಕಾರ್ಯಗತಮಾಡಿಕೊಡಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇವೆ. ಇದು ಬಹಳ ಮುಖ್ಯವಾದ ವಿಚಾರ. ಸುಮಾರು 8-10 ವರ್ಷಗಳಿಂದಲೂ ಜನರು ಅರಿಕೆಮಾಡಿಕೊಳ್ಳುತ್ತಲೇ ಇದ್ದಾರೆ. ಹಾಗಿದ್ದೂ ತಾವೂ ಕೂಡ ಕಣ್ಣಾರೆ ನೋಡಿಯೂ ಇವೊತ್ತಿನವರೆಗೆ ಯಾವ ಪ್ರಯತ್ನಮಾಡಿದ್ದೀರಿ ಎಂಬುದನ್ನು ಮನಮುಟ್ಟಿ ಯೋಚನೆಮಾಡಬೇಕಾಗಿದೆ.

ರೋಡ್ ರೀಕ್ಲಾಸಿಫಿಕೇಷನ್ ಎಂದು ಮಾಡಿದ್ದೀರಿ. ಯಾವುದು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದ್ದು, ಯಾವುದು ಸರ್ಕಾರದವರಿಗೆ ಸೇರಿದ್ದು ಎಂಬುದನ್ನು ಹೇಳಿದ್ದೀರಿ. ಡಿಸ್ಟ್ರಿಕ್ಟ್ ಬೋರ್ಡ್‌ನವರು ಕೆಲವು ರಸ್ತೆಗಳನ್ನೂ, ಸರ್ಕಾರದವರು ಕೆಲವು ರಸ್ತೆಗಳನ್ನೂ ಮೇಂಟೇನ್ ಮಾಡುತ್ತೀರಿ. ಈ ರೋಡ್ ರೀ ಕ್ಲಾಸಿಫಿಕೇಷನ್ ಮಾಡುವಾಗ ನಿಮ್ಮ ರೀತಿ ನೀತಿ ಏನೆಂಬುದನ್ನು ಸರಿಯಾಗಿ ತಿಳಿಸಿಲ್ಲ ಎಂದು ಹೇಳುತ್ತೇನೆ. ಗುಂಡ್ಲು ಪೇಟೆಯಿಂದ ತೆರಕಣಾಂಬಿಗೆ ಬಹಳವಾಗಿ ಬಸ್ ಸಂಚಾರವಿದೆ; ಬೇಕಾದಷ್ಟು ದುಡ್ಡು ಖರ್ಚುಮಾಡಿ ರಸ್ತೆ ರಿಪೇರಿ ಮಾಡಿದಾಗ್ಯೂ ಇವತ್ತಿನ ದಿವಸ ಆ ರಸ್ತೆ ಸಂಚಾರಕ್ಕೆ ಲಾಯಕ್ಕಾಗಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ.

9-30 A.M.

ಇದನ್ನು ಸರ್ಕಾರದ ಗಮನಕ್ಕೆ ತಂದರೆ ಈ ದಿವಸದ ವರೆಗೂ ಈ ರಸ್ತೆ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದೆ, ಸರ್ಕಾರಕ್ಕೆ ಸೇರಿಸಿಕೊಂಡಿಲ್ಲ ಎಂದು ಹೇಳುತ್ತಾರೆ ; ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳಿದರೆ ನಮಗೆ ಸಾಧ್ಯವಿಲ್ಲವೆಂದು ನಾವು ಬಿಟ್ಟಿದ್ದೇವೆ ಎಂದು ಹೇಳುತ್ತಾರೆ. ಹೀಗಾದರೆ ಈ ರಸ್ತೆಗಳ ಜವಾಬ್ದಾರಿ ಯಾರು ಹೊರಬೇಕೋ ಗೊತ್ತಿಲ್ಲ. ಆದ್ದರಿಂದ ಸರ್ಕಾರದವರು ಕೂಡಲೆ ಇದನ್ನು ಪರಿಶೀಲಿಸಿ ಈ ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆ ನೋಡಿಕೊಳ್ಳುವಂತೆ ಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ. ಈ ವಿಚಾರದಲ್ಲಿ ಮಂತ್ರಿಗಳು ಭರವಸೆ ನೀಡಬೇಕು.

ಅನೇಕ ದಿವಸಗಳಿಂದ ಈ ತಾಲ್ಲೂಕಿನ ಕೆಲವು ರಸ್ತೆಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಅನೇಕ ರಸ್ತೆಗಳು ಈ ದಿವಸ ರಿಪೇರಿ ಸಹ ಆಗದೆ ಪ್ರಯಾಣಕ್ಕೆ ನಾಲಾಯಕ್ಕಾಗಿವೆ. ಬಸ್ ಮಾಲೀಕರ ಕಷ್ಟ ಹೇಳತೀರದು. ಇದನ್ನು ಸರಿಪಡಿಸಲು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು. ಮೈಸೂರು ಜಿಲ್ಲೆಗೆ ಸಂಬಂಧಪಟ್ಟಂತೆ ಈ ವರ್ಷದ ಬಡ್ಜೆಟ್ ಅಂಕಿಅಂಶ ನೋಡಿದರೆ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಹೆಚ್ಚು ಹಣ ಕೊಟ್ಟಿಲ್ಲ. ಅನೇಕ ಜಿಲ್ಲೆಗಳಿಗೆ ಕೊಟ್ಟಿರುವುದನ್ನು ಹೋಲಿಸಿದರೆ ಮೈಸೂರು ಜಿಲ್ಲೆಗೆ ಕೊಟ್ಟಿರುವುದು ತೀರಾ ಕಡಮೆ. ಈ ರೀತಿಯಾಗಿ ಮೈಸೂರು ಡಿಸ್ಟ್ರಿಕ್ಟಿನ ಅಭಿವೃದ್ಧಿಯನ್ನು ವರ್ಷೇ ವರ್ಷೇ ಕುಂಠಿತಗೊಳಿಸುತ್ತಿದ್ದರೆ ಯಾವರೀತಿ ಈ ಡಿಸ್ಟ್ರಿಕ್ಟು ಮುಂದುವರಿಯಬೇಕೋ ಅರ್ಥವಾಗುವುದಿಲ್ಲ. ಈ ಡಿಸ್ಟ್ರಿಕ್ಟಿನ ಅಭಿವೃದ್ಧಿಗೆ ಈ ಬಾರಿ ಬಡ್ಜೆಟ್ಟಿನಲ್ಲಾದರೂ ಹೆಚ್ಚುಹಣ ಒದಗಿಸಬೇಕು.

ಕಳೆದ ಎರಡು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಸಿವಿಲ್ ವರ್ಕ್ಸ್‌ನಲ್ಲಿ ಹೆಚ್ಚಿನ ಅಭಿವೃದ್ಧಿ ನಡೆಯದೆ ಈ ಸಾರಿ ತೀರ ಕಡಮೆ ಒದಗಿಸಿದ್ದಾರೆ. 1947ರಲ್ಲಿ ಕ್ಷಾಮ ಪರಿಹಾರದ ಕೆಲಸ ಕೈಕೊಂಡಾಗ ಬೊಮ್ಮಲಾಪುರದ ಕೆರೆ ರಿಪೇರಿಯನ್ನು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಾಡುತ್ತೇವೆಂದು ವಾಗ್ದಾನಮಾಡಿ 52 ಸಾವಿರ ರೂಪಾಯಿಗಳಿಗೆ ಮತ್ತು 59 ಸಾವಿರ ರೂಪಾಯಿಗಳಿಗೆ ಎರಡು ಅಂದಾಜುಮಾಡಿ ಚೀಫ್ ಇಂಜಿನಿಯರಿಗೂ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರಿಗೂ ಎಸ್ಟಿ

(ಶ್ರೀ ಎಚ್. ಕೆ. ಶಿವರುದ್ರಪ್ಪ.)

ಮೇಟ್ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದು ಚೀಫ್ ಇಂಜಿನಿಯರು ಹೋಗಿ ಪುನಃ ಸ್ಥಳ ಪರೀಕ್ಷೆಮಾಡಿ ಇಲ್ಲಿಗೆ ಒಂದೂವರೆ ವರ್ಷವಾಯಿತು. ಹೀಗಾಗಿ ಅಲ್ಲಿ ಒಂದು ಕೆಲಸ ನಡೆಯುವುದಕ್ಕೂ ಅವಕಾಶವಿಲ್ಲವಾಗಿದೆ. ಅದನ್ನು ಪರಿಶೀಲಿಸಬೇಕು; ಪರಿಶೀಲಿಸಿ ಇದನ್ನು ಕೂಡಲೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಬೇಕು. ಈ ರೀತಿಯಾಗಿ ತಾವು ಮಂಜೂರುಮಾಡುತ್ತೇವೆಂದು ಮನಸ್ಸುಮಾಡಿದರೂ, ಸರ್ಕಾರ ಒಪ್ಪಿದರೂ ಅಧಿಕಾರಿಗಳ ಮನೋಭಾವದಿಂದ ಅಥವಾ ತಾತ್ಸಾರದಿಂದ ಖಂಡಿತ ಕೆಲಸವಾಗುತ್ತಿಲ್ಲ. ಮಂಜೂರಾಗಿರುವುದೂ ಈ ರೀತಿ ನಿಂತರೆ ಹೇಗೆ ನಾವು ಮುಂದುವರಿಯಬೇಕೋ ಗೊತ್ತಿಲ್ಲ. ಹೆಗ್ಗಡದೇವನಕೋಟೆ ತಾಲ್ಲೂಕು ಬಿದರಹಳ್ಳ ಅಣೆಕಟ್ಟು ಅತ್ಯಗತ್ಯವಾಗಿ ಆಗಬೇಕಾದದ್ದು. ಕಪಿನಿ ರಿಸರ್ವಾಯಿರನ್ನು ಕಾರಣಾಂತರದಿಂದ ನಿಲ್ಲಿಸಿದ್ದೀರಿ. ಏಕೆ ಅದನ್ನು ನಿರ್ಮಿಸಲು ಕಾರ್ಯಕ್ರಮ ತೆಗೆದುಕೊಳ್ಳದೆ ನಿಲ್ಲಿಸಿರುವುದು ? ಈಸಾರಿಯಾದರೂ ಬಡ್ಜೆಟ್ಟಿನಲ್ಲಿ ಹಣ ಒದಗಿಸಿ ಕಾರ್ಯಗತ ಮಾಡಬೇಕು. ಇದೇ ತಾಲ್ಲೂಕಿನಲ್ಲಿ ಕುಪ್ಪಸೋಗೆಯಿಂದ ಬೆಳತೂರಿಗೆ ಭೃಗು ಹೊಳೆಯಮೇಲೆ ಹೋಗಲು ಸಾಧ್ಯವಿಲ್ಲ, ಮಳೆಗಾಲದಲ್ಲಂತೂ ಬಹಳ ಕಷ್ಟ, ಅದಕ್ಕೆ ಸೇತುವೆ ಕಟ್ಟಬೇಕಾದದ್ದು ಅವಶ್ಯಕ, ಇಲ್ಲದಿದ್ದರೆ ಪ್ರಯಾಣಕ್ಕೆ ತೊಂದರೆಯೆಂದು ಪ್ರಾರ್ಥನೆಮಾಡಿದರೂ ಇದುವರೆಗೂ ಈ ವಿಚಾರಕ್ಕೆ ಗಮನಕೊಟ್ಟಿಲ್ಲ. ಸುತ್ತಮುತ್ತಲಿನ ಹಳ್ಳಿಯವರಿಗೆ ಪ್ರಯಾಣಕ್ಕೆ ಸೌಲಭ್ಯಮಾಡಿಕೊಡಬೇಕಾದದ್ದು ಅಗತ್ಯವಾಗಿರುವುದರಿಂದ ಕುಪ್ಪಸೋಗೆ ಸೇತುವೆಯನ್ನು ಕಟ್ಟಿಸಿ ಜಾಗ್ರತೆ ಜನರಿಗೆ ಸಹಾಯ ಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಸ್ವಾಮಿ, ಈ 29ನೆಯ ಡಿಮ್ಯಾಂಡಿನಮೇಲೆ ಮಾತನಾಡಬೇಕೆಂದು ಬಯಸಿರುವುದು ಸರ್ಕಾರದ ಗಮನಕ್ಕೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಸಂಬಂಧದಲ್ಲಿ ಚಳ್ಳಗಟ್ಟದ ಬಳಿ ಕೆರೆ ಕಟ್ಟುವ ವಿಚಾರದಲ್ಲಿ ಎರಡು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಆ ಪ್ರದೇಶವನ್ನು ಸರ್ವೆಮಾಡಿ ಅಲ್ಲಿ ಕೆರೆಯನ್ನು ಕಟ್ಟಲು ಅನುಕೂಲವಿದೆ, ಆ ಪ್ರದೇಶದ ಜನರಿಗೆ ಅದರ ಅವಶ್ಯಕತೆಯಿದೆ, ಅದರ ಅಂದಾಜು ಇಷ್ಟಾಗುತ್ತದೆ ಎಂದು ಹೇಳಿ ಅದಕ್ಕೆ ರೆವಿನ್ಯೂ ಹೆಡ್‌ನಲ್ಲಿ ಅಂದಾಜು ತಯಾರಿಸಿ ಕಾರ್ಯವನ್ನು ಕೈಕೊಂಡು, ಪೂರ್ವ ಸಿದ್ಧತೆಯನ್ನೆಲ್ಲಾ ಮಾಡಿದಮೇಲೆ ಮತ್ತೆ ಆ ಅಂದಾಜು ಸರಿಯಾಗಿಲ್ಲ, ಆ ಕೆರೆ ಕಟ್ಟುವುದು ಸೂಕ್ತವಲ್ಲ, ಅದು ರೆಮ್ಯೂನರೇಟಿವ್ ಅಲ್ಲ ಎಂದು ಒಂದು ಭಾವನೆ ವ್ಯಕ್ತಪಡಿಸಿ ಕೇವಲ ನಾಲ್ಕಾರು ತಿಂಗಳಲ್ಲೇ ಆ ಒಂದು ಅಭಿಪ್ರಾಯವನ್ನು ಬದಲಾಯಿಸಿರುವುದನ್ನು ಕೇಳಿ ನನಗಂತೂ ತುಂಬ ಆಶ್ಚರ್ಯವಾಗಿದೆ. ಸರ್ಕಾರದವರು ಈ ಒಂದು ಇಲಾಖೆಯಲ್ಲಿ ಪರಿಣತರಿಂದ ತನಿಖೆಮಾಡಿಸಿ ಅಂದಾಜುಮಾಡಿರುವ ಕೆಲಸದ ವಿಷಯದಲ್ಲಿ ಈ ರೀತಿ ತೀವ್ರ ಭಿನ್ನಾಭಿಪ್ರಾಯಪಡುವುದಕ್ಕೆ ಕಾರಣ ವೇನೆಂಬುದೇ ಈದಿವಸದವರೆಗೂ ಗೊತ್ತಾಗಿಲ್ಲ. ಇದಕ್ಕೆ ಕಾರಣ ತಿಳಿಯಲು ರೆವಿನ್ಯೂ ಮಂತ್ರಿಗಳು ಭೇಟಿಕೊಟ್ಟು ಪರಿಶೀಲಿಸಿದಾಗ ನಮ್ಮ ಎದುರಿಗೇ ಇಂಜಿನಿಯರು ಸಹ ಪುನಃ ಈ ಕೆರೆ ರೆಮ್ಯೂನರೇಟಿವ್ ಎಂದು ಹೇಳಿದರು. ನಮ್ಮ ಸಮಕ್ಷಮ ರಿವೈಸ್ಡ್ ಎಸ್ಟಿಮೇಟನ್ನು ಕರೆಂಟ್ ಷೆಡ್ಯೂಲ್ ರೇಟ್ ಪ್ರಕಾರ ಮಾಡುತ್ತೇವೆಂದು ಮಂತ್ರಿಗಳು ಹೇಳಿದರು. ಅದರಂತೆ ಮಾಡಬೇಕೆಂದು ಪತ್ರ ಬರೆದರೆ ಇದುವರೆಗೂ ಏನೂ ಆಗಿಲ್ಲ. 7-8 ತಿಂಗಳಹಿಂದೆ ಪತ್ರ ಬರೆದರೂ ಈ ದಿವಸದವರೆಗೂ ಕರೆಂಟ್ ಷೆಡ್ಯೂಲ್ ಪ್ರಕಾರ ಎಸ್ಟಿಮೇಟ್ ತಯಾರಾಗಿಲ್ಲವೆಂದು ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಮೊನ್ನೆ ಈ ಸಂಬಂಧವಾದ ಪ್ರಶ್ನೆಗೆ ಉತ್ತರಹೇಳಿದ್ದಾರೆ. ಕರೆಂಟ್ ಷೆಡ್ಯೂಲ್ ದರದ ಪ್ರಕಾರ ವರ್ಕ್‌ಔಟ್‌ಮಾಡಿ ಎಸ್ಟಿಮೇಟನ್ನು ಮಂತ್ರಿಗಳಿಗೆ ಒಪ್ಪಿಸಲು 8 ತಿಂಗಳಿಗಿಂತ ಹೆಚ್ಚು ಕಾಲ ಬೇಕೆಂದು ಹೇಳಿದರೆ ಈ ಇಲಾಖೆ ಎಷ್ಟು ಮಟ್ಟಿಗೆ ಕೆಲಸಮಾಡುತ್ತಿದೆಯೆಂಬುದನ್ನು ಅರ್ಥಮಾಡಿಕೊಳ್ಳಬಹುದು.

ಇನ್ನೊಂದು ಅಂಶ, ಕೆರೆಗೆ ಸಂಬಂಧಪಟ್ಟ ಕೆಲವು ತಪಶೀಲನ್ನು ಹೇಳುತ್ತೇನೆ. ಈ ಕೆರೆಗೆ 1,20,000 ರೂಪಾಯಿಗಳ ಅಂದಾಜಾಗಿತ್ತು ಎಂದು ಹಿಂದೆಯೇ ಹೇಳಿದ್ದೇನೆ. ಅಲ್ಲಿ ಸುಮಾರು 60 ಎಕರೆ ಖುಷ್ಕಿ ಜಮೀನು ಮುಳುಗಡೆಯಾಗುತ್ತದೆ. ಬಾಗಾಯ್ತು 10 ಎಕರೆಯಿದೆ. 60 ಎಕರೆ ನೀರು ಮುಳುಗಡೆಯಾದರೂ 161 ಎಕರೆ ತರಿಯಾಗುತ್ತದೆ. ಎಕರೆಗೆ 400 ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ರೈತರು ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ಸುಮಾರು 48 ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಬಹುದು. ಇಂಥ ಕೆರೆಗೆ ಕರೆಂಟ್ ಷೆಡ್ಯೂಲ್ ದರದ ಪ್ರಕಾರ ಅಂದಾಜುಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು........

Sri Kadidal MANJAPPA.—Sir, it is better for me also to reply when the appropriate demand is taken up.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ವಿಷಯ ಬಂದಾಗಲೇ ಮಾತನಾಡುತ್ತೇನೆ. ದಯವಿಟ್ಟು ನನ್ನ ಖೋತಾ ಸೂಚನೆಯನ್ನು ಸಂಬಂಧಪಟ್ಟ ಡಿಮ್ಯಾಂಡಿಗೆ ಸೇರಿಸಬೇಕು. ಈ ಕೆರೆ ಕೆಲಸ ಮಾಡಿಕೊಡಬೇಕೆಂದು ಮಾತ್ರ ಹೇಳುತ್ತೇನೆ. ಬೆಂಗಳೂರು ಜಿಲ್ಲೆಯಲ್ಲಿ ಜಿಲ್ಲಾ ಬೋರ್ಡಿನ ಸ್ವಾಧೀನದಲ್ಲಿದ್ದ ಕೆಲವು ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯ ಆಡಳಿತಕ್ಕೆ ಸೇರಿಸಿಕೊಂಡಿದ್ದಾರೆಂದು ಒಂದು ಪ್ರಶ್ನೆಗೆ ಉತ್ತರವಾಗಿ ಹೇಳಿದ್ದಾರೆ. ಆ ಸಂಬಂಧದಲ್ಲಿ ಒಂದು ಮಾತು. ಸುಮಾರು 400 ಚಿಲ್ಲರೆ ಮೈಲಿ ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಜಿಲ್ಲಾ ಬೋರ್ಡಿನಿಂದ ವಹಿಸಿದೆಯೆಂದು ಹೇಳಿದೆ. ಇದು ಖಂಡಿತ ತಪ್ಪು, ಉತ್ತರ ಕೊಟ್ಟಿರುವುದು ಸರಿಯಾಗಿಲ್ಲವೆಂದು ಖಂಡಿತವಾಗಿ ಹೇಳಬಹುದು. ಇದನ್ನು ವಿಚಾರ ಮಾಡಬೇಕು. ಅಲ್ಲದೆ ಜಿಲ್ಲಾ ಬೋರ್ಡಿನ ಆಡಳಿತದಲ್ಲಿದ್ದ 400 ಮೈಲಿ ರಸ್ತೆಯಲ್ಲಿ ಸರ್ಕಾರದವರು ಎಷ್ಟು ವಹಿಸಿದ್ದಾರೆ, ಯಾವ ಯಾವುದು ಎಂಬ ವಿಷಯದಲ್ಲಿ ಪೂರ್ಣವಾದ ಅಂಕಿ ಅಂಶವನ್ನು ಈ ಸಭೆಯ ಮುಂದಿಡಬೇಕು.

ಎರಡನೆಯದು ಜಿಲ್ಲಾ ಬೋರ್ಡಿನ ಸ್ವಾಧೀನದಲ್ಲಿರುವ ಐ.ವಿ.ಸಿ. ರಸ್ತೆಗೆ ಹೆಚ್ಚು ಒತ್ತಾಯವಿದೆ. ನನ್ನ ದೃಷ್ಟಿಯಲ್ಲಿ ಜಿಲ್ಲಾ ಬೋರ್ಡಿನ ಆಡಳಿತದಲ್ಲಿದ್ದ 400 ಮೈಲಿ ರಸ್ತೆಯನ್ನು ಸರ್ಕಾರ ತೆಗೆದುಕೊಂಡಿರುವಾಗ ಮಿಕ್ಕ ಐ.ವಿ.ಸಿ. ರಸ್ತೆಗಳನ್ನು ಸಹ ಸರ್ಕಾರವೇ ವಹಿಸಿಕೊಂಡು ಆಡಳಿತ ನಡೆಸುವುದು ಮುಖ್ಯವಾದುದೆಂದು ಹೇಳುತ್ತೇನೆ. ಅಲ್ಲದೆ ಈಗ ಬಸ್ ಲೈನುಗಳಿಗೆ ವಿಶೇಷವಾಗಿ ಪರ್ಮಿಟ್ ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಐ.ವಿ.ಸಿ. ರಸ್ತೆಗಳಲ್ಲೂ ಬಸ್ಸುಗಳು ಓಡಾಡುವುದರಿಂದ ಅವೂ ಸಹ ಮುಖ್ಯವಾಗಿವೆ. ಅವಕ್ಕೆ ಸರ್ಕಾರ ಹಣ ಕೊಡುವುದಿಲ್ಲ. ಜಿಲ್ಲಾ ಬೋರ್ಡಿನ

ವರು ಮಣ್ಣಿನ ರಸ್ತೆ ಮಾಡುತ್ತಾರೆ; ಕೆಲವು ರಸ್ತೆಗಳಿಗೆ ಮೆಟಲ್ ಹಾಕಿದ್ದಾರೆ. ಅಂಥ ಕಡೆ ಬಸ್ಸು ಓಡಾಡಲು ಬಹಳ ಕಷ್ಟ. ಮಳೆಗಾಲದಲ್ಲಿ ಬೆಂಗಳೂರು ಜಿಲ್ಲೆಯಲ್ಲಿ, ರಾಜಧಾನಿಯೆಂದು ಹೇಳುವ ಹಾಗಿರುವ ಕಡೆ ಎಲ್ಲಾ ಆಡಳಿತವೂ ಕೇಂದ್ರೀಕೃತವಾಗಿರುವುದರಿಂದ, ಜನರು ಪ್ರತಿ ಕ್ಷಣವೂ ಬೆಂಗಳೂರಿನ ಸಂಪರ್ಕ ಇಟ್ಟುಕೊಂಡಿರುವುದರಿಂದ ಜಿಲ್ಲಾ ಬೋರ್ಡ್ ರಸ್ತೆಗಳಲ್ಲಿ ಪ್ರಯಾಣ ಹೆಚ್ಚಾಗಿದೆ. ಸರ್ಕಾರ ಅವಕ್ಕೆ ಕೊಡುವ ಹಣ ಸಾಲದು. ಆ ದೃಷ್ಟಿಯಿಂದ ಸರ್ಕಾರದವರು ಎಲ್ಲೆಲ್ಲಿ ಬಸ್ಸುಗಳು ಓಡಾಡುತ್ತಿವೆಯೋ ಆ ರಸ್ತೆಗಳನ್ನು ಅವರೇ ವಹಿಸಿಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ-ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಗಳೇ, ಈ ಸಾಲಿನಲ್ಲಿ ಮಲೆನಾಡಿಗೆ ಹೆಚ್ಚು ಗ್ರಾಂಟನ್ನು ಒದಗಿಸಬೇಕು. ಅದರಲ್ಲಿಯೂ ಚಿಕ್ಕಮಗಳೂರು ಜಿಲ್ಲೆಗೆ ಹೆಚ್ಚು ಗ್ರಾಂಟು ಮಂಜೂರು ಮಾಡಬೇಕು. ಸರ್ಕಾರದವರು ಕೆಲವು ಕಾಲದಿಂದ ಮರಾಮತ್ತು ಇಲಾಖೆಯ ಕಾಂಗಾರಿಗಳಿಗೆ ಹೆಚ್ಚು ಹೆಚ್ಚಾಗಿ ಗ್ರಾಂಟನ್ನು ಕೊಟ್ಟು ಹೆಚ್ಚು ಹೆಚ್ಚಾಗಿ ಕೆಲಸ ಮಾಡಿಸುತ್ತಿದ್ದಾರೆ. ಆದರೆ ಸಂಸ್ಥಾನಾದ್ಯಂತ ಎಲ್ಲಾ ಪ್ರದೇಶಗಳಿಗೂ ಒಂದೇ ವಿಧವಾಗಿ ಗ್ರಾಂಟನ್ನು ಹಂಚುವ ನೀತಿಯನ್ನನುಸರಿಸುತ್ತಿರುವುದೇನೋ ನಿಜ. ಆದರೆ ಈಗಿನ ನೀತಿಯನ್ನು ಸ್ವಲ್ಪ ಬದಲಾಯಿಸಿ ಮಲೆನಾಡಿಗೆ ಹೆಚ್ಚಾಗಿ ಗ್ರಾಂಟನ್ನು ಕೊಡಬೇಕು. ಮಲೆನಾಡಿನಲ್ಲಿ ಜನ ಸಂಚಾರಕ್ಕೆ ಬಹಳ ತೊಂದರೆಯಾಗಿದೆಯೆಂಬುದು ಮಾನ್ಯ ಮಂತ್ರಿಗಳಿಗೆ ಮನವರಿಕೆಯಾಗಿದೆ. ಈಗಾಗಲೇ ಮಲೆನಾಡಿನಲ್ಲಿ ಜನ ಸಂಚಾರಕ್ಕೆ ರಸ್ತೆಯಿಲ್ಲದೆ ಅಲ್ಲಿನವರು ತಾವು ಬೆಳೆದಂಥ ದವಸ ಧಾನ್ಯಗಳನ್ನೂ ಕಾಫಿ ಇತ್ಯಾದಿ ಪದಾರ್ಥಗಳನ್ನೂ ಸುಮಾರು 10-20 ಮೈಲಿಗಳ ಫಾಸಲೆಯಿಂದ ಕತ್ತೆಯ ಮೇಲೆ ಹೇರಿಕೊಂಡು ಬರುವುದಕ್ಕೆ ಎಷ್ಟು ವೆಚ್ಚವಾಗುತ್ತಿದೆ ಮತ್ತು ಎಷ್ಟು ಕಷ್ಟವಾಗುತ್ತಿದೆ ಎಷ್ಟು ಕಾಲ ವ್ಯಯವಾಗುತ್ತಿದೆ ಎಂಬುದನ್ನು ದಯವಿಟ್ಟು ಸಾವಧಾನವಾಗಿ ವಿಮರ್ಶೆಮಾಡಿ ಪರಿಶೀಲಿಸಬೇಕೆಂದು ಕೇಳುತ್ತೇನೆ. ಅನೇಕ ಸಂದರ್ಭಗಳಲ್ಲಿ ಜನಸಂಚಾರಕ್ಕೆ ಅನುಕೂಲವಿಲ್ಲದೆ ಅನೇಕ ತೊಂದರೆಗಳು ಉದ್ಭವಿಸಿವೆ. ಖಾಯಿಲೆ ಬಂದಾಗ ರೋಗಿಗಳನ್ನು ಸಾಗಿಸಲು 10-20 ಮೈಲಿಗಳ ದೂರ ಸೌಕರ್ಯವಿಲ್ಲದೆ ಎಷ್ಟು ತೊಂದರೆಯಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ರಸ್ತೆಗಳಿಲ್ಲದ ಕಡೆಗಳಲ್ಲಿ ರೋಗಿಗಳನ್ನು ಜೋಲಿಯಲ್ಲಿ ಹೊತ್ತುಕೊಂಡು ಬಂದು ಆಸ್ಪತ್ರೆಗಳಿಗೆ ಸಾಗಿಸುತ್ತಿರುವ ದೃಶ್ಯವನ್ನು ನೋಡಿದರೆ ಎಂತಹ ಜನಗಳ ಹೃದಯವೂ ಕರಗದಿರಲಾರದು.

ಅಲ್ಲದೆ ಈ ಮಲೆನಾಡಿನಲ್ಲಿ ಸಾಧಾರಣವಾಗಿ ಕಾಮಗಾರಿ ಕೈಗೊಳ್ಳುವುದಾದರೆ ಸರ್ಕಾರದವರು ಈ ವಿಚಾರದಲ್ಲಿ ತಜ್ಞರ ಅಭಿಪ್ರಾಯ ಪಡೆದು ಯಾವುದನ್ನು ಮೊದಲು ಕೈಗೊಳ್ಳಬೇಕು, ಯಾವುದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು ಎಂಬುದನ್ನು ಯೋಚಿಸಬೇಕು. ಕೆಲವು ಜನರು ಅನೇಕ ಅರ್ಜಿಗಳನ್ನು ಸರ್ಕಾರಕ್ಕೆ ಸಲ್ಲಿಸಿದರೂ ಸಹ ಕೆಲವು ಅತ್ಯವಶ್ಯಕವಾದ ಕಾಮಗಾರಿಗಳನ್ನು ಕೈಗೊಳ್ಳದೆ, ಒಂದು ವೇಳೆ ಕೆಲವು ಕಾಮಗಾರಿಗಳನ್ನು ಕೈಗೊಂಡರೂ ಸಹ ಎಷ್ಟು ಜಾಗ್ರತೆ ಅವುಗಳ ಕೆಲಸವನ್ನು ಮಾಡಬಹುದೋ ಅಷ್ಟು ಜಾಗ್ರತೆ ಆ ಕಾರ್ಯಕ್ರಮಕೈಗೊಳ್ಳದೆ ಕಾಲಹರಣ ಮಾಡುತ್ತಾ ಆ ಕಾರ್ಯ ಮುಂದುವರಿಯುವುದಕ್ಕೆ ಬಿಡುವುದರಿಂದ ಎಷ್ಟು ತೊಂದರೆಯಾಗಿದೆ ಎಂಬುದನ್ನು ಪರಿಶೀಲಿಸಬೇಕು. ಈಗಾಗಲೇ ಖೋತಾ ನಿರ್ಣಯದ ಮೂಲಕ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆಯಬೇಕಾದ ಕಾಂಗಾರಿಗಳ ವಿಚಾರದಲ್ಲಿ ಅನೇಕ ಮನವಿಗಳನ್ನೂ ಮಾಡಿಕೊಂಡಿದ್ದೇನೆ. ಚಿಕ್ಕಮಗಳೂರು ತಾಲ್ಲೂಕು ವಸ್ತಾರೆ ಹೋಬಳಿ ಜಿಜಕ್ಕನಹಳ್ಳಿಯಿಂದ ಬೆಟ್ಟದಮಾಳಲಿ ಮೂಲಕ ಜಿರಗೋಡಿಗೂ ಅಲ್ಲಿಂದ ಸಂಗಮೇಶ್ವರ ಪೇಟೆಯವರೆಗೂ ಒಂದು ರಸ್ತೆ ಮಾಡಬೇಕೆಂದಿದೆ; ಇದು ಅತ್ಯಗತ್ಯ. ಹೀಗೆಯೇ ಉಪ್ಪಳ್ಳಿ ಹತ್ತಿರ ಯಗಚಿ ಹೊಳೆಗೆ ಸೇತುವೆ ಅಗತ್ಯ. ಇದರಿಂದ ಬಹುಮಂದಿ ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಕೂಳಲೆಯಿಂದ ಚಿನ್ನಗೋಡನಳ್ಳಿಗೆ ಸುಮಾರು 1½ ಮೈಲಿ ಫಾಸಲೆ ಇರುವ ರಸ್ತೆಯನ್ನು ಮಾಡಿಸಿದರೆ ಸುಮಾರು 15 ಮೈಲಿ ಸುತ್ತಿಕೊಂಡು ಚಿಕ್ಕಮಗಳೂರಿಗೆ ಬರುವುದರ ಬದಲು ಕೇವಲ 8 ಮೈಲಿಗಳ ಫಾಸಲೆಯಲ್ಲಿಯೇ ಚಿಕ್ಕಮಗಳೂರು ಜನಗಳು ಪ್ರಯಾಣ ಮಾಡಿ ಸೇರಬಹುದಾಗಿದೆ. ಅಲ್ಲದೆ, ನರಗನಹಳ್ಳಿ ಹತ್ತಿರ ಯಗಚಿ ಹೊಳೆಗೆ ಅಣೆಕಟ್ಟು ಕಟ್ಟುವುದಕ್ಕಾಗಿ 16 ಸಾವಿರ ರೂಪಾಯಿಗಳ ಅಂದಾಜು ತಯಾರಾಗಿ ಆ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡಿನ ಮಂಜೂರಾತಿ ಸಹ ಆಗಿದ್ದು ಕೆಲಸ ಪ್ರಾರಂಭವಾಗಿಲ್ಲ. ಇದು ಏತಕ್ಕೆ ಆಗಿಲ್ಲವೆಂಬುದನ್ನು ವಿಚಾರಿಸಬೇಕು. ಮೂಡಿಗೆರೆ—ದೇವುಂದದ ಹತ್ತಿರ ಬೈರಾಪುರ ಗ್ರಾಮಕ್ಕೆ ಒಂದು ರಸ್ತೆ ಆಗಬೇಕೆಂದು ಕೇಳುತ್ತಿದ್ದಾರೆ. ಮೂಡಿಗೆರೆ ಹತ್ತಿರ ಸೇತುವೆಯೊಂದಕ್ಕೆ ಮುಖ್ಯ ಮಂತ್ರಿಗಳು ಅಸ್ತಿಭಾರ ಸಹ ಹಾಕಿರುತ್ತಾರೆ. ಇದಕ್ಕೆ ಎಸ್ಟಿಮೇಟ್ ಕೂಡ ತಯಾರಾಗಿದೆ. Tender call for ಮಾಡಿ, ಎಷ್ಟೋ ಸಾರಿ ಈ ಬಗ್ಗೆ ಟೆಂಡರ್‌ಗಳು ಬಂದಿದ್ದರೂ ಅವು ಮಂಜೂರಾಗದೆ ಕಾಲ ಹರಣವಾಗುತ್ತಿರುವುದು ವಿಷಾದಕರವಾದುದು. ಇನ್ನು ಕಡೂರು—ಮಂಗಳೂರು ರಸ್ತೆ ಹೀನಸ್ಥಿತಿಯಲ್ಲಿದೆ. ಅಲ್ಲಿ ರಸ್ತೆ ರಿಪೇರಿಗೆಂದು 1-2 ವರ್ಷಗಳ ಹಿಂದೆಯೇ ಜಲ್ಲಿಯನ್ನು ಸಹ ಜಮಾವಣೆ ಮಾಡಿ ಸೇರಿಸಿದ್ದಾರೆ. ಹೀಗಿದ್ದೂ ಇದನ್ನು ಉಪಯೋಗಿಸದೆ ಹಾಗೆಯೇ ಬಿಟ್ಟಿದ್ದರೆ ಆ ಜಲ್ಲಿ ಹಾಗೆಯೇ ಇರುತ್ತದೆಯೇ ಎಂಬುದನ್ನು ಯೋಚಿಸಬೇಕು. ಈ ರಸ್ತೆಯ ಸ್ಥಿತಿಯನ್ನು ನೋಡಿ ಅಲ್ಲಿನ ಜನರು ಬಹುಮಟ್ಟಿಗೆ ಪಶ್ಚಾತ್ತಾಪ ಪಟ್ಟುಕೊಂಡಿರುತ್ತಾರೆ. ಈ ರಸ್ತೆಯ ರಿಪೇರಿ ಅತ್ಯಗತ್ಯವಾಗಿರುವುದರಿಂದ ಸರ್ಕಾರದವರು ಈ ಬಗ್ಗೆ ಕಾರ್ಯಕ್ರಮವನ್ನು ಅತಿ ತ್ವರಿತವಾಗಿ ಕೈಗೊಳ್ಳಬೇಕೆಂದು ಕೋರುತ್ತೇನೆ. ಅಲ್ಲದೆ ಚಿಕ್ಕಮಗಳೂರಿನ ಹಿರೀಕೊಳಲೆ ಕೆರೆಯನ್ನು ಜೀರ್ಣೋದ್ಧಾರಮಾಡಲು ಅತಿ ಜಾಗ್ರತೆಯಾಗಿ ಮಂಜೂರು ಮಾಡಿ ಕೂಡಲೇ ಈ ಕೆರೆ ಕಾಂಗಾರಿಯನ್ನು ಪ್ರಾರಂಭ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಕೆರೆಯ ಜೀರ್ಣೋದ್ಧಾರದ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರಿನಲ್ಲಿ ಆದಿಕರ್ಣಾಟಕ ಬೋರ್ಡಿಂಗ್ ಹೋಂ ಇದೆ. ಇದರ ಕಟ್ಟಡ ಬಹಳ ಶಿಥಿಲವಾಗಿದೆ. ಈಗಿರುವ accommodation ಕೂಡ ಏನೇನೂ ಸಾಲದು. ಇದನ್ನು ಬಡಾವಣೆಗೊಳಿಸಬೇಕೆಂದು ಅನೇಕ ದಿವಸಗಳಿಂದ ಜನರ ಒತ್ತಾಯ ಬರುತ್ತಿದೆ. ಈ ಬಿಲ್ಡಿಂಗ್ ರಿಪೇರಿ ಅತ್ಯಗತ್ಯವಾದುದು ಮತ್ತು ಅತಿ ತ್ವರಿತವಾಗಿ ಆಗಬೇಕಾದುದು. ಪ್ರತಿವರ್ಷ ಬಿಲ್ಡಿಂಗ್ ರಿಪೇರಿಗೆಂದು ಒದಗಿಸುತ್ತಿರುವ ಹಣ ಲ್ಯಾಪ್ಸ್ ಆಗಿದೆಯೆಂದು ಕೇಳುತ್ತೇನೆ. ಹೀಗಾಗಿದ್ದರೆ ಇದು ವಿಷಾದಕರ

(ಶ್ರೀ ಜಿ. ಪುಟ್ಟಸ್ವಾಮಿ.)

[Sri K. PRABHAKAR in the Chair]

ಈ ಬಗ್ಗೆ ಸರ್ಕಾರದವರು ಸ್ವಲ್ಪವೂ ಕೂಡ ತಡ ಮಾಡದೆ ಇದರ ರಿಪೇರಿ ಮತ್ತು ಬಡಾವಣೆಯ ಬಗ್ಗೆ ತೀವ್ರ ಕಾರ್ಯಕ್ರಮ ಕೈಗೊಳ್ಳುವುದು ಅಗತ್ಯವೆಂದು ಹೇಳುತ್ತೇನೆ.

ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿ ಕೆರೆಯು ಒಡೆದು ಹೋಗಿರುವುದಕ್ಕೆ ಕಾರಣವೇನು ಎಂಬುದನ್ನು ತನಿಖೆಮಾಡುವುದು ಅವಶ್ಯಕ. ಈ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳು ಮುಂಜಾಗ್ರತೆ ಕ್ರಮ ಕೈಗೊಂಡಿದ್ದರೆ ಇದರಿಂದ ನಷ್ಟ ಸಂಭವಿಸುತ್ತಿರಲಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಈ ಬಗ್ಗೆ ತೀವ್ರ ಕಾರ್ಯಕ್ರಮವನ್ನು ಕೈಗೊಂಡು ಈ ಕೆರೆ ಕಾಮಗಾರಿಯನ್ನು ಅತಿ ಜರೂರಾಗಿ ಮಾಡಿಸಬೇಕೆಂದು ಕೋರುತ್ತೇನೆ.

Sri A. BHEEMAPPA NAIK (Molakalmuru).—Is there no time-limit fixed ?

Mr. CHAIRMAN (SRI K. PRABHAKAR.)—Time-limit was not announced.

Sri A. BHEEMAPPA NAIK.—Now I want to know whether a definite time-limit cannot be fixed ?

Mr. CHAIRMAN.—For to-day it was not fixed.

A VOICE.—Five minutes for each may be fixed.

Mr. CHAIRMAN.—But when the previous members spoke, they had their full chance and time-limit was not insisted upon.

Sri A. BHEEMAPPA NAIK.—Because they limited their speeches. But the Hon'ble Member is going on for the past fifteen minutes.

Mr. CHAIRMAN.—Hereafter those who speak will strictly adhere to the time-limit.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಈ ಇಲಾಖೆಯಲ್ಲಿ ಆಡಳಿತ ನಡೆಸತಕ್ಕ ವಿಚಾರದಲ್ಲಿ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಈ ಇಲಾಖೆಯವರು ಈ ಕೆಲಸಕಾರ್ಯಗಳಿಗೆ temporary ಮೇಸ್ತ್ರಿಗಳನ್ನು ನೇಮಕಮಾಡುತ್ತಿದ್ದಾರೆ. ಈ ಬಗ್ಗೆ ತಮಗೆ ಇಷ್ಟ ಬಂದ ಹಾಗೆ ನೇಮಕಮಾಡುವುದು ಸರಿಯಲ್ಲ. ಇದರ ಬಗ್ಗೆ ಸರ್ಕಾರದವರು ಸರಿಯಾದ ನಿಗಾ ಕೊಡಬೇಕೆಂದೂ, ಮಲೆನಾಡಿನ ವಿಚಾರದಲ್ಲಿ ಹೆಚ್ಚಿನ ಸಹಾನುಭೂತಿಯನ್ನು ತೋರಿಸಿ ಈ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಹೆಚ್ಚಿಗೆ ಗ್ರಾಂಟನ್ನು ಒದಗಿಸಿ ಈ ಮರಾಮತ್ ಇಲಾಖೆಯ ಕಾಂಗಾರಿಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಜಾಗ್ರತೆಯಾಗಿ ತೃಪ್ತಿಕರವಾಗಿ ನಡೆಯಲು ಏರ್ಪಾಡು ಇಡಬೇಕಾಗಿ ಬಯಸುತ್ತೇನೆಂದು ಹೇಳಿ ಈ ಖೋತಾ ನಿರ್ಣಯವನ್ನು ಮಂಡಿಸುತ್ತೇನೆ.

Mr. CHAIRMAN.—You have taken more time than is necessary.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ಸಿವಿಲ್ ಕಾಮಗಾರಿ ವಿಚಾರವಾಗಿ ಅನೇಕರು ಮಾತನಾಡಿರುತ್ತಾರೆ. ಈ ಬಗ್ಗೆ ಸರ್ಕಾರದವರು ಸಹ ಮುತವರ್ಜಿಯಿಂದ ತಮ್ಮ ಕೆಲಸಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ರಸ್ತೆಗಳ ಕೆಲಸ ಬಹಳ ಬಿರುಸಿನಿಂದ ನಡೆಯುತ್ತಿದೆ. ಮುಖ್ಯವಾಗಿ ನಮ್ಮ ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಈಗ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ವರ್ಗಾಯಿಸಿರುವುದು ಬಹಳ ಒಳ್ಳೆಯದು. ಇನ್ನುಮೇಲೆ ರಸ್ತೆಯ ಕೆಲಸ ಚೆನ್ನಾಗಿ ಆಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಮುಖ್ಯವಾಗಿ ನಮ್ಮ ನೆಲಮಂಗಲದ ಕಡೆ, ಬೇಗೂರು—ತ್ಯಾಮಗೊಂಡ್ಲು—ನೆಲಮಂಗಲದ ಕಡೆ ರಸ್ತೆಗೆ ಟಾರು ಹಾಕಿಸಬೇಕೆಂದು ಕೇಳಿದರೂ ಇದುವರೆಗೆ ಅದು ಕಾರ್ಯಗತವಾಗದೇ ಇರುವುದು ಶೋಚನೀಯ. ಈ ಬಗ್ಗೆ ಸರ್ಕಾರಕ್ಕೆ ಪ್ರಾರ್ಥನೆ ಸಲ್ಲಿಸಿ ಹಲವಾರು ವರ್ಷಗಳಾದವು. ಈಗಲಾದರೂ ಸರ್ಕಾರದವರು ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಂಡು ಆ ರಸ್ತೆಗೆ ಟಾರು ಹಾಕಿಸುತ್ತಾರೆಂದು ನಂಬಿರುತ್ತೇನೆ. ಈಗಾಗಲೇ ಡಿಸ್ಟ್ರಿಕ್ಟ್ ಬೋರ್ಡಿನವರು ಈ ರಸ್ತೆಯ ಬಗ್ಗೆ ಸ್ವಲ್ಪ ಮಟ್ಟಿಗೆ ರಿಪೇರಿಮಾಡಿ ಕೈಬಿಟ್ಟಿರುತ್ತಾರೆ. ಇನ್ನುಳಿದ ಕೆಲಸದ ಬಗ್ಗೆ ಸರ್ಕಾರದವರು ಮುತವರ್ಜಿ ವಹಿಸಿದರೆ ಈ ಕೆಲಸ ತೃಪ್ತಿಕರವಾಗಿ ಆಗುತ್ತದೆಂದು ಸೂಚಿಸುತ್ತೇನೆ.

* ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, 29ನೆಯ ಸಿವಿಲ್ ವರ್ಕ್ಸ್ ಸಂಬಂಧದಲ್ಲಿ ಈ ಇಲಾಖೆಯಲ್ಲಿ ಕೆಲಸ ಎಷ್ಟು ಮಟ್ಟಿಗೆ ನಡೆಯುತ್ತಿದೆ, ಇಲ್ಲಿ ಕೆಲಸ ಕಾರ್ಯ ನಿಧಾನವಾಗಲು ಕಾರಣಗಳೇನು ಎಂಬುದನ್ನು ಸರ್ಕಾರದ ಗಮನಕ್ಕೆ ತರುವ ಉದ್ದೇಶದಿಂದ ನಿಂತಿರುತ್ತೇನೆ. ಈ ಸಿವಿಲ್ ವರ್ಕ್ಸ್ ಬಾಬಿಗಾಗಿ ಸರ್ಕಾರದವರು 3,14,82,943 ರೂಪಾಯಿಗಳ ಡಿಮ್ಯಾಂಡ್ ಕೇಳಿರುತ್ತಾರೆ. ಶ್ರೀ ಯು.ಎಂ. ಮಾದಯ್ಯನವರು ಮಾತನಾಡುವಾಗ ಈ ಬಗ್ಗೆ ಸರ್ಕಾರದವರು ದುಡ್ಡನ್ನು ಹಂಚಿಕೆ ಮಾಡುವ ವಿಚಾರದಲ್ಲಿ ರೀತಿನೀತಿಯನ್ನು ಅನುಸರಿಸುತ್ತಿಲ್ಲವೆಂದು ಹೇಳಿ ಅದಕ್ಕೆ ಉದಾಹರಣೆಯಾಗಿ ನಂಜನಗೂಡು ಸಬ್ ಡಿವಿಜನ್ ವಿಚಾರ ತಿಳಿಸಿದರು. ಅಲ್ಲಿನ ರಸ್ತೆಗಳು ಬಹಳ ಅವ್ಯವಸ್ಥೆಯಲ್ಲಿವೆ. ಸರ್ಕಾರಿ ಬಸ್‌ಗಳು, ಮುನಿಸಿಪಲ್ ಲಾರಿಗಳು ಇವುಗಳ ಸಂಚಾರ ಅಲ್ಲಿ ಜಾಸ್ತಿಯಾಗಿರುವುದಲ್ಲದೆ, ಈ ವರ್ಷ ಸ್ವಲ್ಪ ಹೆಚ್ಚಿನ ಮಳೆ ಬಂದುದರಿಂದ ಕಪ್ಪುಮಣ್ಣು ಪ್ರದೇಶಗಳಲ್ಲಿ ಈ ರಸ್ತೆ ಬಹಳ ಕೆಟ್ಟಿದೆ. ಅಲ್ಲಲ್ಲಿ ಗುಂಡಿಗಳು, ಗುಣಿಗಳು ಬಿದ್ದು ಎತ್ತಿನ ಗಾಡಿಗಳು ತಿರುಗಾಡುವುದಕ್ಕೆ ಬಹಳ ತೊಂದರೆಯಾಗಿದೆ. ಇಷ್ಟೇ ಅಲ್ಲದೆ ಡಿಸ್ಟ್ರಿಕ್ಟ್ ಬೋರ್ಡಿಗೆ ಒಳಪಟ್ಟ Inter-village communication ರಸ್ತೆಗಳಲ್ಲಿ ಹೆಚ್ಚಾಗಿ ಬಸ್‌ಗಳು ಓಡಾಡಲು ಅವಕಾಶ ಕಲ್ಪಿಸಿರುವುದು ಸಹ ಈ ರಸ್ತೆಗಳ ದುರವಸ್ಥೆಗೆ ಕಾರಣವಾಗಿದೆಯೆಂದು ಹೇಳುವವರಲ್ಲಿ ನಾನೊಬ್ಬ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು instruction ಕೊಟ್ಟಿದ್ದರೂ ಎಸ್ಟಿಮೇಟ್ ತಯಾರಾಗುವುದು ತಡವಾಗಿ ಈ ಕೆಲಸ ಕಾರ್ಯದ ಬಗ್ಗೆ ಆಲಸ್ಯ ಮನೋಭಾವ ಏಕೋ ನನಗೆ ಗೊತ್ತಾಗಿಲ್ಲ. ಚಾಮರಾಜ ನಗರದಲ್ಲಿ ಸುವರ್ಣಾವತಿ ನದಿ 40 ಮೈಲಿ ಉದ್ದವಿದ್ದರೂ ಹತ್ತನೆಯ ಮೈಲಿಯಲ್ಲಿ ಒಂದು ಸೇತುವೆ ; ಅಲ್ಲಿಂದ ಇನ್ನು 30 ಮೈಲಿಗಳವರೆಗೆ ಸೇತುವೆ ಇಲ್ಲ. ಈ ಸುವರ್ಣಾವತಿ ನದಿಯ ಮೂಲಕ ಎಳಂದೂರು ಮಂಡ್ಯ ಕಡೆ ಸಂಚಾರಕ್ಕೆ ಮೂರು ತಿಂಗಳ ಕಾಲ ತೊಂದರೆ ಇದೆ. ಈ ಬಗ್ಗೆ ರಸ್ತೆ ಸಂಚಾರ ವ್ಯವಸ್ಥೆಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

Mr. CHAIRMAN.—The House will now rise for lunch and reassemble at 10-30.

The House adjourned for Lunch at Ten of the Clock and reassembled at Thirty Minutes past Ten of the Clock.

[MR. SPEAKER in the Chair]

Sri S. SRINIVASA IYENGAR (T.-Narsipur).—Sir, I beg to oppose the Demand. Sir, the Public Works Department is a nation-building department, while every other department comes after the Public Works Department. Townships are built by the Public Works Department and revenue administrators and others come later. But unfortunately the Department has been looked down and it has been stamped as insincere. Officers of the Revenue Department can aspire to become I. A. S. Officers, but the officers of the Public Works Department are neglected and consigned to the secondary place among the departments of Government.

Sir, in the P. W. Department somehow for the last four years there has been a good lot of increase in the expenditure towards establishment. There was a reorganisation during the time when Hon'ble Sri T. Mariappa was the Minister in 1949 and the Government claimed that they would save a lot of expenditure under establishment under that re-organisation in the P. W. Department. But unfortunately from the date of re-organisation till today there has been increase in establishment and I do not know how the Government will justify the increase. So far as development expenditure is concerned, I can very well say that the Government are not spending the full allotment under Public Works Department as provided in their Budget. I can substantiate my statement by reading the figures:

In 1950-51 the amount spent was		1.52 crores
In 1951-52	,,	2.13 ,,
In 1952-53	,,	1.87 ,,

So the expend ture in 1952-53 under Civil Works has decreased while the establishment has increased, as shown hereunder:

In 1950-51 the establishment was		6.5 lakhs
In 1951-52	,,	14.54 ,,
In 1952-53	,,	16.02 ,,
In 1953-54	,,	25.41 ,,

Sri A. BHEEMAPPA NAIK (Molakalmuru).—You are not taking capital works into consideration.

Sri S. SRINIVASA IYENGAR.—I believe the establishment charge is transferred to the respective heads under 68, 18, 17 and 19; the establishment charge debited under '50. Civil Works' is referred to by me. So it is a matter for examination for the Department and the Government to see why there has been increase in establishment and lowering of standards.

Well, Sir, I have very little time before me and the subject is so big. I believe I would need at least an hour to express myself fully so that the Members and the House would be convinced about my stand. Unfortunately I have no time. I must therefore be very brief.

Sir, the other thing I want to say that the most important defect in the Public Works Department, as it is in Mysore, is the absence of a design section. Many of the works cannot be executed in time because estimates would not have been finalised, provision would not have been made and the necessary sanctions would not have been received by the concerned Department; and therefore there is every year lapse of funds and even surrender of large amounts. I would very much urge that at least a design section should be established composed of expert staff. In military, they have an Estimate Officer. If a work is undertaken, this officer is responsible to prepare the design, plans and estimates thoroughly and the Executive Engineer is there to execute what has been prepared and handed over to him by the Estimate Officer. What we are having here is, estimates and plans are prepared by the sub-overseer and they reach the Government for sanction,

(SRI S. SRINIVASA IYENGAR.)

Whatever mistakes he will have made will be carried throughout the Department up to the Government and when the work is taken up for execution, all these mistakes will have to be corrected and as such these estimates will have to be revised.

Sri T. MARIAPPA (Mysore City North).—There is a section in each Executive Engineer's Office now.

Sri S. SRINIVASA IYENGAR.—Yes, I know, but it is not enough. It is not working as efficiently as it should. My point is, you establish a design section in the Department and make this design section responsible for all the designing and estimating of works and let them prepare plans thoroughly. I know many instances wherein estimates are revised just because of foundations having not properly been designed, the cost of materials not having been properly provided; the designs differ from district to district and there is no uniform standards. Therefore I submit that an independent design section which will be responsible for designing, planning and other details should be established in each district and the Executive Engineer must only be made to execute what has been handed over to him. Then I believe you can immediately see that almost all these works that you propose to take up during the year could be carried out without subsequent revision of estimates.

Sir, the other thing is decentralisation of power. Very recently the powers were enlarged and the powers of sanction of the Executive Engineer, the Superintending Engineer and the Chief Engineer and the ultimate power of the Government have all been enhanced. But the rates have since increased and consequently the smallest possible estimate has to come to the Chief Engineer for sanction because of increased rates in the schedule. Therefore there is so much delay and increase of correspondence in the Superintending Engineer's office; I know very definitely that about 80 per cent of the correspondence in the office of the Superintending Engineer is about the sanction of estimates. If only action is taken to enlarge the powers you can not only reduce the correspondence in the various offices, but also can get the work done properly and quickly.

The third point which I would like to impress is about the registration of contractors. There is so much paucity of trained contractors as a result of which we see that many untrained contractors undertake works and in the course of execution the work is suspended and delayed for some reason or other. Therefore registration of contractors as is done in other parts of India, namely, Madras, is a thing that will have to be done if you want to get improved work from the Department.

Sir, the fourth point is about Road Fund. Last time in my Budget speech, I said that Government did not have a Road Fund and consequently roads had been neglected although a large amount was being collected from traffic on roads. The Government collect the petrol tax, the vehicle tax, the road cess and the tolls; last year they have enhanced tax on petrol and that itself has brought in 12 to 13 lakhs. I submit, Sir, that the Road Fund was constituted by Mysore Government long back and it was in existence from 1937 for 15 long years. Somehow the Road Fund has now been abolished. Now I am suggesting to Government that a Road Fund has to be formed once again and a certain proportion out of the general revenue has to be credited to that fund; all the taxes collected from vehicles that use the road must also be credited to the Road Fund and also all the taxes and duties that are levied on petrol must also come to this fund and you must operate that fund for the maintenance of roads and construction of roads and bridges.

Lastly, Sir, it is a local matter about which I am very particular. T-Narsipur and especially Talkad is a border town in Mysore State. It lies in the south-eastern portion of Mysore State. I do urge for the construction of a bridge over the river Cauvery near Hemmige so as to shorten the route to Kollegal and further it will shorten the distance between Talkad and T.-Narsipur by about 20 miles. If you want to reach

Talkad from T-Narsipur, as it is to-day, it would be 25 miles of road journey and by constructing the bridge near Hemmige the distance would be only 8 miles. You will have not only reduced the distance by 17 miles, but also building up an approach road to contact another border town called Kollegal. Talkad is a very large and important town and it is a historic town too. If this bridge is constructed, Talkad will develop and it would be easy to maintain contact with trading centre like Kollegal.

Sri V. M. MASCARENHAS (St. John's Hill).—Mr. Speaker, Sir, I consider the Department of Public Works as a fortunate Department. It is fortunate because, it has the privilege of spending to-day large sums of money to the tune of a few crores of rupees which very many other Departments have not.

Sri A. BHEEMAPPA NAIK.—Seven crores.

Sri V. M. MASCARENHAS.—It is fortunate because it tends to help some of its officers to build up small fortunes. It is fortunate also in having earned the largest number of tributes. Which other department has been called 'Public Enemy'? Which other department is called a Public Waste Department? Phrases like these have not been levelled at the Public Works Department in a haphazard or in an unwise manner. In this very Assembly, year after year, in the discussion on the Budget and Grants, Members with all vehemence at their command have been telling us about the shortcomings of the Department and the Government in turn, with all the coolness at their command, continue to heed it here and forget it for the rest of the year.

To-day, Sir, I am just thinking as to what is wrong with this department. I am inclined to believe that the very system is at fault. In the olden days, unfortunately, this department became the monopoly of a small community and perhaps that resulted in a system which to-day deserves to be scrapped. When we consider that the department has come to a stage where by spending public money is no consideration at all, what is the future for a State like ours or for a country like ours if the working of this department is not drastically altered and some new system introduced? The other day, on February 14th to be very exact, I was going to Chitaldrug. Certain section of the road was being tarred. What was our surprise when we found there neither the contractor nor the supervisor or any other representative of the Public Works Department. Of course, the Minister for Public Works is in Bangalore, but what were the officers doing? We went to Chitaldrug and brought this matter to the notice of the Executive Officer. That callous gentleman did not give a satisfactory answer. He promised to give an explanation *re*: Tuppadahalli and Sangenahalli within 72 hours and now it is 27th March and the information is not forthcoming. We did not go there as private individuals; as members of the Public Accounts Committee we went there. You will, therefore, see how the department is going on. They act as old 'Nawabs.' When we are having deficit budgets, when we are struggling for every pie, if something is not done to see that every rupee that is spent is spent well and it does not go to somebody's pocket, I am afraid, the days in future are bound to be very very gloomy.

I would therefore suggest that Government should immediately appoint a small committee from among the members of this House to make concrete recommendations not only to change the entire structure of the department but also to suggest ways and means by which public money, which is so liberally and generously granted, is spent wisely and usefully. Thank you.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಅನೇಕ ಕೆಲಸಕಾರ್ಯ ನಡೆಯುತ್ತಿದೆ. ಈ ಇಲಾಖೆಯು ಚೆನ್ನಾಗಿ ಕೆಲಸ ಮಾಡಿದರೂ ಕೂಡ ಯಾವಾಗಲೂ ಹಣ ಉಳಿಯುತ್ತಲೇ ಇರುತ್ತದೆ. ಈಗ ಇದು ಅಷ್ಟು ಸಮರ್ಪಕವಾಗಿ ಕೆಲಸ ಮಾಡುವುದಿಲ್ಲವೆಂಬ ಭಾವನೆ ಮೂಡಿದೆ. ಶ್ರೀ ರಾಜಗೋಪಾಲಾಚಾರಿಯವರೂ ಕೂಡ ಇದು ಯಾವ ರೀತಿ ಕೆಲಸ ಮಾಡುತ್ತದೆಂಬುದನ್ನು ಹೇಳಿದ್ದಾರೆ. ಈಗ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎರಡು ಕೆಲಸಗಳಾಗಬೇಕೆಂದು ಎಸ್ಟಿಮೇಟಾಗಿದ್ದರೂ ಅದನ್ನು ಕೇಳುವವರೇ ಇಲ್ಲವಾಗಿದೆ. ಎಗ್ಸಿಕ್ಯುಟಿವ್ ಇಂಜಿನಿಯರನ್ನು ಕೇಳಿದರೆ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಹೋಗಿದೆಯೆಂದೂ,

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಸೂಪರಿಂಟೆಂಡಿಂಗ್ ಇಂಜಿನಿಯರನ್ನು ಕೇಳಿದರೆ ಚೀಫ್ ಇಂಜಿನಿಯರಿಗೆ ಹೋಗಿದೆಯೆಂದೂ, ಚೀಫ್ ಇಂಜಿನಿಯರನ್ನು ಕೇಳಿದರೆ ಸರ್ಕಾರಕ್ಕೆ ಹೋಗಿದೆಯೆಂದೂ ಹೇಳುತ್ತಾರೆ; ಅಸೆಂಬ್ಲಿ ಮೆಂಬರು ಕೇಳಿದರೂ ಸರ್ಕಾರವನ್ನು ಕೇಳಿ ಎಂದು ಹೇಳುತ್ತಾರೆ. ಅಂದಾಜು ಎಲ್ಲಿದೆಯೆಂಬುದನ್ನು ಪತ್ತೆಮಾಡುವುದೇ ಕಷ್ಟ. ಹಿಂದೆ ರೆವೆನ್ಯೂ ಮಂತ್ರಿಗಳಾಗಿ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆ ಮಂತ್ರಿಗಳಾಗಿ ಈಗ ಈ ಸಭೆಯ ಅಧ್ಯಕ್ಷರಾಗಿರುವವರು ಕಡೂರು ತಾಲ್ಲೂಕಿನಲ್ಲಿ ಯಲ್ಲಂಬಳಸೆ ಹತ್ತಿರ ಹಳ್ಳಕ್ಕೆ ಒಂದು ಫುಟ್‌ಬ್ರಿಡ್ಜ್ ಆಗಬೇಕು, ಕೆರೆ ಕೋಡಿ ಬಿದ್ದಾಗ 1½ ತಿಂಗಳಕಾಲ ಸಂಚಾರಕ್ಕೆ ತೊಂದರೆ ಎಂದು ಹೇಳಿದಮೇಲೆ ಅದಕ್ಕಾಗಿ ಒಂದು ಎಸ್ಟಿಮೇಟನ್ನು ಮಾಡಿಸಿದ್ದರು. ಈಗ ಅದೇನಾಯಿತೆಂದು ಹೇಳುವವರೇ ಗತಿಯಿಲ್ಲ. ಸುಮಾರು 13 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟಾಗಿದ್ದರೂ ಇದುವರೆಗೂ ಕೆಲಸವೇನೂ ನಡೆದಿಲ್ಲ. ಮಳೆ ಬಂದಾಗ ನದಿ ದಾಟುವುದು ಕಷ್ಟ. ನಮ್ಮ ತಾಲ್ಲೂಕಿನ ಅಯ್ಯನಕೆರೆ, ಮದಗದಕೆರೆ ದೊಡ್ಡ ಕೆರೆಗಳು ಆದ್ದರಿಂದ ಅವು ಕೋಡಿಬಿದ್ದಾಗ 1½ ತಿಂಗಳು ಪ್ರವಾಹ ದಾಟುವುದು ಕಷ್ಟ. ಇದರ ಎಸ್ಟಿಮೇಟ್ ಎಲ್ಲಿದೆಯೆಂಬುದನ್ನು ಪತ್ತೆಮಾಡಿ ಕೆಲಸ ಮಾಡಬೇಕು.

ಎರಡನೆಯದಾಗಿ, ಕಡೂರು ತಾಲ್ಲೂಕಿನಲ್ಲಿ ಅನೇಕ ದೊಡ್ಡ ಗ್ರಾಮಗಳಿವೆ. ಒಂದೊಂದು ಗ್ರಾಮದಲ್ಲೂ 500 ಮನೆಗಳಿಗೆ ಕಡಮೆಯಿಲ್ಲ. ಅಸಂದಿಗ್ರಾಮಕ್ಕೆ 1½ ಮೈಲಿ ಹೋಗಿ ಬರಲು ರಸ್ತೆ ಮಾಡಬೇಕು, ಸೇತುವೆ ಮಾಡಬೇಕು ಎಂದು ಡಿಸ್ಟ್ರಿಕ್ಟ್ ಬೋರ್ಡನ್ನು ಮತ್ತು ಸರ್ಕಾರವನ್ನು ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಇದು ಬಹಳ ಪ್ರಾಮುಖ್ಯವಾದುದು. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿರುವ ದೊಡ್ಡ ಗ್ರಾಮಗಳಿಗೆ ಜಾಗ್ರತೆ ರಸ್ತೆ ಮತ್ತು ಸೇತುವೆಯನ್ನು ಮಾಡಿಕೊಡಬೇಕು.

ಮೂರನೆಯದಾಗಿ ಕಡೂರು ತಾಲ್ಲೂಕು ರೆವೆನ್ಯೂನಲ್ಲಿ 85 ತಾಲ್ಲೂಕುಗಳಲ್ಲಿ ಐದನೆಯ ತಾಲ್ಲೂಕು ಎಂದು ಹೇಳುತ್ತಾರೆ. ಆದರೆ ಬಡ್ಜೆಟ್ ನೋಡಿದರೆ ಕಡೂರು ತಾಲ್ಲೂಕನ್ನು ಮರೆತಿರುವ ಹಾಗೆ ಕಾಣುತ್ತದೆ. ಅಲಾಟ್ ಮಾಡುವಾಗ ಏಕೆ ಮರೆತರೋ ಗೊತ್ತಾಗುವುದಿಲ್ಲ. ಮಂತ್ರಿಗಳು ನಮ್ಮ ತಾಲ್ಲೂಕು ನಮ್ಮ ದೇಶದಲ್ಲಿ ಹೆಚ್ಚು ಆದಾಯ ಕೊಡುವ ತಾಲ್ಲೂಕೆಂಬುದನ್ನು ನೋಡಿ ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಕೆಲಸಕಾರ್ಯ, ಕಟ್ಟಡ, ಸೇತುವೆ, ರಸ್ತೆ ಆಗುವಂತೆ ಮಾಡಬೇಕೆಂದು ಮನವಿಮಾಡುತ್ತೇನೆ.

ಇನ್ನೊಂದು ಉದಾಹರಣೆ ಕೊಡುತ್ತೇನೆ. ಗಂಗನಹಳ್ಳಿ ಕೆರೆ ಒಡೆದುಹೋಗಿ 7-8 ತಿಂಗಳಾಯಿತು. 60 ಎಕರೆಗಳಲ್ಲಿ ಭತ್ತದ ಬೆಳೆಯಾಗುತ್ತಿತ್ತು. ಅದಕ್ಕೆ ಬಂಡುಹಾಕಿ ಕೆರೆ ರಿಪೇರಿಮಾಡಿ ಭತ್ತ ಬೆಳೆಯಲು ಅನುಕೂಲಪಡಿಸಿಕೊಡಿ ಎಂದು ಕೇಳಿದರೆ ಎಸ್ಟಿಮೇಟ್ ಬಂದಿಲ್ಲವೆಂದು ಹೇಳುತ್ತಾರೆ. ಕೆರೆ ಹಿಂದಿರುವ ಜಮೀನಿಗೆ ನೀರಿಲ್ಲದಿದ್ದರೆ ಬೆಳೆ ಹೇಗಾಗಬೇಕು ಎಂದು ಕೇಳಿದರೆ ಸರ್ಕಾರಕ್ಕೆ ಎಸ್ಟಿಮೇಟ್ ಕಳುಹಿಸಿದ್ದೇವೆ, ಬರಲಿ ಎಂದು ಹೇಳುತ್ತಿದ್ದಾರೆ. ಮಳೆಗಾಲ ಷುರುವಾಗುತ್ತಿದೆ. ಈಗ ಸುಮಾರು 50 ಎಕರೆಗಳಲ್ಲಿ ಹಾಕಿದ್ದ ಭತ್ತದ ಫಸಲು ಒಣಗಿಹೋಗಿದೆ. ಅವರಿಗೆ ಪರಿಹಾರ ಕೊಡುವವರು ಯಾರು? ಹೀಗೆ ನಿಧಾನ ಮಾಡಿದರೆ ಆ ರೈತರ ಗತಿಯೇನು ಎಂಬುದನ್ನು ಸರ್ಕಾರ ಗಮನಿಸಿಲ್ಲ. ಈಗಲಾದರೂ ಮನಸ್ಸಿಗೆ ತಂದುಕೊಂಡು ಮಳೆಗಾಲ ಪ್ರಾರಂಭವಾಗುವುದರೊಳಗಾಗಿ ಈ ಕೆರೆ ರಿಪೇರಿ ಮಾಡಿಸಬೇಕು.

ಚಿಕ್ಕಮಗಳೂರಿನಿಂದ ಕಡೂರಿಗೆ ರೈಲು ಸೌಕರ್ಯ ಮಾಡಿಕೊಡಬೇಕೆಂದು ಎಷ್ಟೋಸಲ ಕೇಳಿದ್ದರೂ ಮಾಡಿಲ್ಲ; ಟಾರುರಸ್ತೆ, ಸಿಮೆಂಟು ರಸ್ತೆ ನಮ್ಮ ಕಡೆ ಮಾಡಿ ಎಂದು ಹೇಳಿದರೂ ವರ್ಷಕ್ಕೆ 2-3 ಮೈಲಿಯಷ್ಟು ಮಾತ್ರ ಮಾಡುತ್ತಿದ್ದಾರೆ. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಿಗೆ ಒಂದೆರಡು ವರ್ಷಗಳಲ್ಲಿ ಟಾರು ರಸ್ತೆ ಮತ್ತು ಸಿಮೆಂಟ್ ರಸ್ತೆ ಮಾಡಿಸಬೇಕು. ಚಿಕ್ಕಮಗಳೂರು-ಮಂಗಳೂರು ರಸ್ತೆ ಮಾಡುತ್ತಿರುವುದನ್ನು ಜಾಗ್ರತೆ ಪೂರೈಸಲು ಏರ್ಪಾಡು ಮಾಡಬೇಕು.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು—ಮೂಡಿಗೆರೆ).—ಸ್ವಾಮಿ, ಸಿವಿಲ್ ವರ್ಕ್ಸ್ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ಸರ್ಕಾರದವರು ಮೂಲೆ ಮೂಲೆಗಳಲ್ಲಿರುವ ರಸ್ತೆಗಳಿಗೆ, ಸೇತುವೆಗಳಿಗೆ ನಿಗಾ ಕೊಡುತ್ತಿದ್ದಾರೆ. ಆದರೆ ಪಬ್ಲಿಕ್ ವರ್ಕ್ಸ್ ಇಲಾಖೆ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆಯೆಂಬುದನ್ನು ತಿಳಿಸಲಿಚ್ಛಿಸುತ್ತೇನೆ. ಈಗೇನಾಗಿದೆಯೆಂದರೆ ಒಂದು ಕೆಲಸ ಷುರು ಮಾಡಲು ಅರ್ಜಿ ಕೊಟ್ಟರೆ ಅದಕ್ಕೆ ಎಸ್ಟಿಮೇಟಾಗಿ ಅದು ಎಗ್ಸಿಕ್ಯೂಟಿವ್ ಇಂಜಿನಿಯರವರ ಆಫೀಸಿಗೆ ಹೋಗಿ ಅಲ್ಲಿಂದ ಸೂಪರಿಂಟೆಂಡಿಂಗ್ ಇಂಜಿನಿಯರವರ ಆಫೀಸಿಗೆ ಬಂದು ನಂತರ ಚೀಫ್ ಇಂಜಿನಿಯರ ಬಳಿಗೆ ಹೋಗಿ ಮಂಜೂರಾಗಿ ಬರಬೇಕಾದರೆ ಐದಾರು ವರ್ಷಗಳ ಮೇಲಾಗುತ್ತದೆ. ಕೆಲಸವಾದ ಮೇಲೆ ಕಂಟ್ರಾಕ್ಟರು ಇಂಜಿನಿಯರ ಆಫೀಸಿಗೆ ಬಂದರೆ ಜಾಗ್ರತೆ ಆತನಿಗೆ ಹಣ ಪಾವತಿ ಮಾಡುವುದಿಲ್ಲ. ಕೆಲವು ಸಲ ಊರಿನ ಅಡ್ರೆಸ್ಸಿಗೆ ಚೆಕ್ ಕಳುಹಿಸುತ್ತಾರೆ. ಇದೆಲ್ಲಾದರೂ ಉಂಟೆ? ಕಂಟ್ರಾಕ್ಟರು 20 ಸಾರಿ ಆಫೀಸಿಗೆ ತಿರುಗಿ ಹಣ ಪಡೆಯಬೇಕು. ಹೀಗಾದರೆ ಉತ್ತಮವಾದ ಕೆಲಸ ಮಾಡುವವರು ಸಿಕ್ಕುವುದು ಕಷ್ಟ. ಕಷ್ಟಪಡುವವರಿಗೆ ಅದಷ್ಟು ಜಾಗ್ರತೆ ಅವರಿಗೆ ಬರಬೇಕಾದ್ದನ್ನು ಇತ್ಯರ್ಥಮಾಡಬೇಕು. ಕೆಲಸವಾದ ತಕ್ಷಣ ಬಿಲ್ಲನ್ನು ಬೇಗ ಪಾಸುಮಾಡಿ ಹಣ ಕೊಡುವಂತೆ ಏರ್ಪಾಟುಮಾಡಬೇಕಾದದ್ದು ಅಗತ್ಯವಾಗಿದೆ.

ರಸ್ತೆ ರಿಕ್ಲಾಸಿಫಿಕೇಷನ್ ಆದ ಮೇಲೆ ಜಿಲ್ಲಾ ಬೋರ್ಡಿಗೆ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕೆಲವು ರಸ್ತೆಗಳನ್ನು ಹಂಚಲಾಗಿದೆ. ಆದರೆ ಡಿಸ್ಟ್ರಿಕ್ಟ್ ಬೋರ್ಡಿಗೆ ವಹಿಸಿರುವ ಐ. ವಿ. ಸಿ. ರಸ್ತೆಗಳ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಒಬ್ಬ ಸಬ್ ಓವರ್‌ಸಿಯರಿದ್ದಾರೆ. ನಮ್ಮ ಊರಿನ ಹತ್ತಿರವಿರುವ ಬೆಟ್ಟದಮನೆ ದೇವರಮನೆ ರಸ್ತೆಗೆ 28 ಮೈಲಿಯವರೆಗೆ ಎಸ್ಟಿಮೇಟಾಗಿದೆ. ಆದರ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಇದರಿಂದ ಜನರಿಗೆ ಅನಾನುಕೂಲವಾಗಿದೆ. ಇಲ್ಲಿನ ಸಬ್ ಓವರ್ಸಿಯರು ಮಾಡುವ ಕೆಲಸಗಳಲ್ಲಿ ಬಹಳ ಲೋಪದೋಷಗಳಿವೆ. ಚಿಕ್ಕಮಗಳೂರಿನಲ್ಲಿ ಸುಮಾರು 15—20 ವರ್ಷಗಳಿಂದ ಒಂದೇ ಡಿವಿಷನ್ನಲ್ಲಿ ಕೆಲಸ ಮಾಡುವವರು ಅನೇಕರಿದ್ದಾರೆ. ಅವರನ್ನು ಚಿಕ್ಕಮಗಳೂರಿನಿಂದ ಕಡೂರಿಗೆ, ಕಡೂರಿನಿಂದ ಚಿಕ್ಕಮಗಳೂರಿಗೆ ಹಾಕುತ್ತಿದ್ದಾರೆ. ಇದರಿಂದ ಜನರಿಗೂ ಕಂಟ್ರಾಕ್ಟರುಗಳಿಗೂ ತೊಂದರೆಯಾಗಿದೆ. ಎಲ್ಲಾ ಕೆಲಸಗಳನ್ನೂ ಅವರಿಗೆ ಬೇಕಾದ ಕಂಟ್ರಾಕ್ಟರೊಬ್ಬರಿಗೆ ವಹಿಸುತ್ತಾರೆ; ಅವರು ಹೇಳಿದ ಹಾಗೆ ಕೇಳುವವರಿಗೆ ಮಾತ್ರ ಕೊಡುತ್ತಾರೆ. ಇದರಿಂದ ಜನರಿಗೆ ಅನುಕೂಲವಾಗುವುದಿಲ್ಲ. ನಮ್ಮ ಜಿಲ್ಲೆ ಅಭೂತಪೂರ್ವ ಮಲೆನಾಡಿನಲ್ಲಿದೆಯೆಂದು ಸರ್ಕಾರಕ್ಕೆ

ಹೇಳುತ್ತಿದ್ದೇವೆ. ಮೂಡಿಗೆರೆಯ ಹತ್ತಿರ ಮೂರು ಹಳ್ಳಿಗಳಿಗೆ ಹೋಗುವ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿಸಿದ್ದಾರೆ. ಅದಕ್ಕೆ ಸರಿಯಾದ ನಿಗಾ ಕೊಟ್ಟಿಲ್ಲ. ಅದರಿಂದ ಖಾಯಿಲೆಯವರು ಗರ್ಭಿಣಿಯರು ಆಸ್ಪತ್ರೆಗೆ ಹೋಗಿ ಬರಲು ಅನಾನುಕೂಲವಾಗಿದೆ. ಡಿಸ್ಟ್ರಿಕ್ಟ್ ಬೋರ್ಡ್ ಅದನ್ನು ಮಾಡುತ್ತಿಲ್ಲ. ಸರ್ಕಾರ ಇದನ್ನು ಗಮನಿಸಿ ಇಂಥ ದೊಡ್ಡ ಮಾರ್ಗವನ್ನು ಕೂಡಲೇ ಮಾಡಿಸಿದರೆ ಒಳ್ಳೆಯದು. ಸುಮ್ಮನೆ ಒಂದು ಸಲ ಸ್ವಲ್ಪ ಹಣ ಖರ್ಚು ಮಾಡಿದರೆ ಸಾಲದು. ಕೆಲಸ ಸಮರ್ಪಕವಾಗಿ ಆಗಬೇಕು. ಹಾಗೆಯೇ ಬೈರಾಪುರದ ರಸ್ತೆಯೂ ಆಗಬೇಕು. ಸರ್ಕಾರದವರು ಹಣ ಖರ್ಚುಮಾಡುವುದಕ್ಕೆ ತಕ್ಕಂತೆ ಸರಿಯಾಗಿ ಕೆಲಸ ನಡೆಯಬೇಕು

ಆಮೇಲೆ ಸೇತುವೆ ವಿಚಾರ ಹೇಳುತ್ತಾ ಮಲೆನಾಡಿನ ಕಷ್ಟ ಸುಖ ಹೇಳಬೇಕಾಗಿದೆ. ಕಿತ್ಲೆಗಟ್ಟು ಸೇತುವೆ ನಮ್ಮ ತಾಲ್ಲೂಕಿನಲ್ಲಾಗಬೇಕಾಗಿದೆಯೆಂದು ಹೇಳುತ್ತಲೇ ಇದೆ. ಇದು 50 ವರ್ಷಗಳ ಪ್ರಶ್ನೆ. ಹಿಂದಿನ ಸರ್ಕಾರ ಬೇಜವಾಬ್ದಾರಿ ಸರ್ಕಾರ ಎಂದು ಹೇಳುತ್ತಿದ್ದುದು ಅದನ್ನು ಮಾಡದಿದ್ದರೂ ಹೊಸ ಸರ್ಕಾರವಾದರೂ ಮಾಡಬೇಕಾಗಿತ್ತು. ಇಲ್ಲಿಯವರೆಗೆ ಎಷ್ಟೋ ಸಲ ಹೇಳಿದರೂ ಮಾಡಿರುವುದಿಲ್ಲ. ಭರವಸೆ ಮಾತ್ರ ಕೊಡುತ್ತಿದ್ದಾರೆ. ಕಂಟ್ರಾಕ್ಟರು ಬಂದು 3 ಸಾವಿರ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಿ ಬಿಟ್ಟು ಬಿಟ್ಟರು. ಆ ಕೆಲಸ ಇನ್ಯಾರೂ ಒಪ್ಪಿಕೊಳ್ಳುತ್ತಿಲ್ಲ. ಅದು ಬಹಳ ದೊಡ್ಡ ಸೇತುವೆಯಾದ್ದರಿಂದ ಕಂಟ್ರಾಕ್ಟರುಗಳು ಹೆದರುತ್ತಾರೆ. ಆದುದರಿಂದ ಅಲ್ಲೇ ಒಂದು ಡಿವಿಷನ್ ಏರ್ಪಾಡು ಮಾಡಿ ಕೆಲಸ ನಡೆಸಲು ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ಖಂಡಿತ ಆ ಕೆಲಸವಾಗುವುದಿಲ್ಲ. ಹೇಮಾವತಿ ನದಿಯನ್ನು ಮಳೆಗಾಲದಲ್ಲಿ ದಾಟುವುದಕ್ಕಾಗುವುದಿಲ್ಲ. ಆಗ ಹೆಂಗಸರೂ ಸಹ ನಾಟಿ ಹಾಕುವುದಕ್ಕೆ, ಗದ್ದೆ ಕೆಲಸಕ್ಕೆ ಮತ್ತು ಇತರ ಕೆಲಸಗಳಿಗೆ ನದಿದಾಟಿ ಹೋಗಬೇಕಾಗುತ್ತದೆ. ಪ್ರವಾಹಹೆಚ್ಚಿದಾಗ ಕೊಚ್ಚಿಕೊಂಡು ಹೋಗುತ್ತಾರೆ. ಪ್ರತಿವರ್ಷವೂ 5—6 ಮಂದಿ ಕೊಚ್ಚಿ ಹೋಗುವುದು ಕೇಳಿ ಬರುತ್ತಿದೆ. ಗರ್ಭಿಣಿ ಹೆಂಗಸರನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದರೆ ನದಿ ದಾಟುವುದಕ್ಕಾಗುವುದಿಲ್ಲ. ಹೀಗಾಗಿ ಬಹಳ ತೊಂದರೆಯಾಗಿದೆ. ಇದರಿಂದ ಮಲೆನಾಡಿನವರಿಗೆ ಬಹಳ ಕಷ್ಟವಾಗಿದೆ. ಹೇಮಾವತಿ ನದಿಗೆ ಕೂಡಲೆ ಸೇತುವೆ ಮಾಡಬೇಕಾದದ್ದು ಆವಶ್ಯಕ. ರಸ್ತೆಗಳೂ ಸಹ ಬೇಕಾದಷ್ಟು ಆಗಬೇಕು. ಮಲೆನಾಡಿನ ಕಷ್ಟ ಸುಖ ತಿಳಿದ ಮಾನ್ಯ ಮಂತ್ರಿಗಳು ಈ ಕಡೆ ಹೆಚ್ಚಾಗಿ ನಿಗಾ ಕೊಟ್ಟು ಜಾಗ್ರತೆ ನಾನು ಕೇಳಿರುವ ಅನುಕೂಲತೆಗಳನ್ನು ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಶ್ರೀಮಾನ್ ರಾಜಗೋಪಾಲಾಚಾರಿಯವರು ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ಪಬ್ಲಿಕ್ ಎನಿಮಿ ನಂಬರ್ ಒನ್ ಎಂದು ಹೇಳಿದರೆಂದು ಎಲ್ಲರೂ ಪುನರಾವರ್ತನೆ ಮಾಡಿ ಅವರಿಗಿದ್ದ ನೈತಿಕ ಬಲವನ್ನು ಕಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಕಾಣುತ್ತದೆ. ಮಾಡಿದ ಕೆಲಸವನ್ನು ಒಪ್ಪೋಣ. ಸಾರ್ವಜನಿಕರ ಸ್ನೇಹಿತರಲ್ಲಿ ಅವರೂ ಒಬ್ಬರು. ನಂಬರ್ ಒನ್ ಎಂದು ಹೇಳುವುದಕ್ಕೆ ಬದಲಾಗಿ ನಂಬರ್ ಟೆನ್ ಎಂದು ಹೇಳಿ. ಆ ಇಲಾಖೆಯವರು ಕೆಲಸಮಾಡುತ್ತಿದ್ದಾರೆಂಬ ಒಂದು ಅಭಿಪ್ರಾಯವಿದೆ. ಆದರೆ ಈ ವಿಧವಾದ ಪ್ರಜೆಗಳಿಗಾಗಿರುವ ತೊಂದರೆಗಳಿಗೆ ಕಾರಣ ಬರೀ ಅವರೇ ಅಥವಾ ಈಗಿರುವ ಪದ್ಧತಿಯೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಸರ್ಕಾರವೇ ಇದಕ್ಕೆ ಕಾರಣವೆಂಬುದು ನನ್ನಭಿಪ್ರಾಯ. ರೆಡ್ ಟೇಪಿಸಂ ಬೇಕಾದಷ್ಟಿದೆಯೆಂದು ಹೇಳಿದರೂ ಅಧಿಕಾರವೆಲ್ಲಾ ಕೇಂದ್ರದಲ್ಲಿ ಕೇಂದ್ರೀಕೃತವಾಗಿರುವಾಗ ಕೆಲಸಮಾಡುವುದು ಹೇಗೆ? ಸರಿಯಾಗಿ ಕೆಲಸವಾಗಲು ಅಧಿಕಾರ ವಿಕೇಂದ್ರೀಕರಣವಾಗಬೇಕು. ಅದಾದ ಹೊರತು ಏನೂ ಆಗುವುದಿಲ್ಲ. ಎಗ್ಸಿಕ್ಯೂಟಿವ್ ಇಂಜನಿಯರು, ಅಸಿಸ್ಟೆಂಟ್ ಇಂಜಿನಿಯರು ಮುಂತಾದ ಅಧಿಕಾರಿಗಳಿಗೆ ಬೇಕಾದಷ್ಟು ಸಂಬಳ ಕೊಡುವಾಗ ಎಸ್ಟಿಮೇಟ್ ಮಂಜೂರು ಮಾಡುವುದಕ್ಕೆ ಅವನಿಗೆ ಅಧಿಕಾರವಿರುವುದಿಲ್ಲ; ಹಾಗಾಗಬಾರದು. ಒಂದು ವೇಳೆ ಅವರು ತಪ್ಪು ಮಾಡಿದರೆ, ಕಣ್ಣು ಮುಚ್ಚಿಕೊಂಡು ಕೈಬಿಟ್ಟು ಕುಳಿತುಕೊಂಡಿದ್ದಾರೆಂದು ಗೊತ್ತಾದರೆ, ಕ್ರಿಮಿನಲ್ ಲಾ ಇದೆ, ಕ್ರಮ ತೆಗೆದುಕೊಳ್ಳಲು ತಕ್ಕ ಕಾನೂನಿದೆ, ಅದರ ಪ್ರಕಾರ ತಕ್ಕ ಕ್ರಮ ಕೈಕೊಳ್ಳಬಹುದು. ಹೀಗೆ ಸಾಮಾನ್ಯವಾಗಿ ಒಂದು ಅಭಿಪ್ರಾಯವಿದೆ.

11 A.M.

ಆಮೇಲೆ ರಸ್ತೆ ಕಾಮಗಾರಿ ವಿಚಾರದಲ್ಲಿ ಎಲ್ಲಿ ನೋಡಿದರೂ ಈ ರಸ್ತೆ ರಿಪೇರಿ ಕೆಲಸವಾಗಬೇಕು, ಆ ರಸ್ತೆ ರಿಪೇರಿ ಕೆಲಸವಾಗಬೇಕೆಂದು ಹೇಳುವುದು ನೋಡಿದರೆ ಇದಕ್ಕೆ ಈಗಿನ system ಕಾರಣ ಎಂದು ಒಂದು ವಿಧದಲ್ಲಿ ಹೇಳಬಹುದು. ಹೈದರಾಬಾದಿನಲ್ಲಿ ಒಂದು ವಿಧವಾದ system ಇಟ್ಟುಕೊಂಡಿರುತ್ತಾರೆ. ಅಲ್ಲಿ maintenance gang ಎಂದು ಏರ್ಪಡಿಸಿಕೊಂಡು ಐದು ಮೈಲಿಗೊಂದು gang ವ್ಯವಸ್ಥೆ ಮಾಡಿಕೊಂಡು, ಅಲ್ಲಿಯೇ ಅವರು ಮನೆ ಮಠಗಳನ್ನು ಮಾಡಿಕೊಂಡು ಆ ಫಾಸಲೆಯಲ್ಲಿ ಕಾಮಗಾರಿ ಕೆಲಸ ನೋಡಿಕೊಳ್ಳುತ್ತಾರೆ. ಒಂದು gang ಎಂದರೆ ನಾಲ್ಕು ಜನ ಕೂಲಿಗಾರರು, ಅವರ ಮೇಲೆ ಒಬ್ಬ ಓವರ್‌ಸೀಯರ್—ಹೀಗೆ ಐದು ಜನರನ್ನುಳ್ಳ ಒಂದು gang ಏರ್ಪಡಿಸಿ ಅವರಿಗೆ ಬೇಕಾದ ಸಾಧನ ಸಲಕರಣೆಗಳನ್ನು ಕೊಟ್ಟು ತಕ್ಕ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಈ ರೀತಿ ಒಂದು ವ್ಯವಸ್ಥಿತ ಕಾರ್ಯಕ್ರಮ ಅತ್ಯವಶ್ಯಕ. ಅಲ್ಲದೆ ಈ ಕೆಲಸ ನಿರ್ವಹಿಸಲು ಅವರಿಗೆ ಆಸಕ್ತಿ ಇರಬೇಕು. ಒಂದೊಂದು area ಕ್ಕೆ ಏನು ಸಲಕರಣೆಗಳು ಬೇಕು ಎಂಬುದನ್ನು ಅರಿತು ಅವಶ್ಯಕವಾಗಿ ಅವುಗಳನ್ನು ಅಲ್ಲಿಗೆ ಒದಗಿಸಬೇಕು. ಈಗಾಗಲೇ ಈ ವಿಚಾರದಲ್ಲಿ ಶ್ರೀ ಮ್ಯಾಸ್‌ಕರನ್‌ಹ್ಯಾಸ್‌ರವರು ತಿಳಿಸಿರುವಂತೆ, ಈ ಬಗ್ಗೆ ಕೆಲಸ ಕಾರ್ಯಗಳು ತಡವಾಗಿರುವುದಕ್ಕೆ ಕಾರಣವೇನು, ಇವುಗಳು ಸುಗಮವಾಗಿ ನೆರವೇರಲು ಏನು ವ್ಯವಸ್ಥೆ ಮಾಡಬೇಕೆಂಬ ಬಗ್ಗೆ ಸರಿಯಾದ ಸಮಿತಿಯೊಂದನ್ನು ಏರ್ಪಡಿಸಿ ಒಂದು ನಿರ್ದಿಷ್ಟವಾದ ಯೋಜನೆಯ ಮೇಲೆ ಕೆಲಸಕಾರ್ಯಗಳನ್ನು ನಿರ್ವಹಿಸದಿದ್ದರೆ ಏನೂ ಸಾರ್ಥಕವಿಲ್ಲ.

ಹೀಗೆಯೇ ಬಿಲ್ಡಿಂಗ್ ರಚನೆಯ ವಿಚಾರದಲ್ಲಾದರೂ ಒಂದು ನಿರ್ದಿಷ್ಟ ಕಾರ್ಯಕ್ರಮದ ನೀತಿಯನ್ನು ಅನುಸರಿಸಲಾಗುತ್ತಿದೆಯೇ? ಯೂನಿವರ್ಸಿಟಿ ಬಿಲ್ಡಿಂಗ್‌ಗಾಗಿ 47 ಲಕ್ಷ ರೂಪಾಯಿಗಳ ಹಣವನ್ನೊದಗಿಸಲಾಗಿತ್ತು. ಆದರೆ ಇದುವರೆಗೂ ಆ ಬಗ್ಗೆ ಕಟ್ಟಡ ನಿರ್ಮಿತವಾಗಿಲ್ಲ. ಈ ಇಲಾಖೆಯ ಕೆಲಸ ಕಾರ್ಯ ದಕ್ಷತೆಯಿಂದ ನಡೆಯಬೇಕಾದರೆ ಈ ಬಗ್ಗೆ ನಿಪುಣರ ಸಮಿತಿಯೊಂದನ್ನು ರಚಿಸಿ ಅವರ ಸಲಹೆಯಂತೆ ಕೆಲಸ ಕಾರ್ಯವನ್ನು ನಡೆಸಿಕೊಂಡು ಹೋಗಬೇಕು. ಈ ಇಲಾಖೆಯ ಆಡಳಿತ ಹಾಗೂ ಸಿಬ್ಬಂದಿ ಖರ್ಚು ಹೆಚ್ಚಾಗದಂತೆ

(ಶ್ರೀ ಎ. ಭೀಮಪ್ಪನಾಯಕ್.)

ನೋಡಿಕೊಳ್ಳಬೇಕು. ಕೆಲವು ಕಡೆ ಬಹಳ ಹೆಚ್ಚಿನ ಸಿಬ್ಬಂದಿ, ಇನ್ನು ಕೆಲವು ಕಡೆ ಬಹಳ ಕಡಮೆ ಸಿಬ್ಬಂದಿ ಈ ರೀತಿ ಇರಲು ಅವಕಾಶ ಇರಬಾರದು.

ಇನ್ನು ಗ್ರಾಮಾಂತರ ರಸ್ತೆಗಳ ವಿಚಾರದಲ್ಲಿ ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ. ಈ ರಸ್ತೆಗಳು ತೀರಾ ಅವ್ಯವಸ್ಥೆಯಲ್ಲಿವೆ. ಇದಕ್ಕೆಲ್ಲಾ ಈ ಇಲಾಖೆಯೇ ಕಾರಣವೆಂದರೆ ತಪ್ಪಲ್ಲ. ಅದಕ್ಕೇ ಈ ಇಲಾಖೆಯನ್ನು Public Enemy No. 1 ಎಂದು ಕರೆಯುವುದು. ಈ ಅವ್ಯವಸ್ಥೆಗೆ ನೂರಕ್ಕೆ 90 ಭಾಗ ಸರ್ಕಾರವೇ ಕಾರಣವೆಂದು ಹೇಳದೇ ವಿಧಿಯಿಲ್ಲ. ಈ ಇಲಾಖೆಯ ಕೆಲಸ ಕಾರ್ಯದ ವಿಚಾರದಲ್ಲಿ ಸರ್ಕಾರ ಸರಿಯಾದ ನೀತಿಯನ್ನು ಅನುಸರಿಸುತ್ತಿಲ್ಲ. ಅನೇಕ ರಸ್ತೆಗಳಲ್ಲಿ ಗಾಡಿಗಳು ಸಹ ಸರಿಯಾಗಿ ಹೋಗಲು ಅನುಕೂಲವಾಗಿಲ್ಲದ ಸಂದರ್ಭಗಳಿದ್ದರೂ ಬಸ್ಸುಗಳ ಓಡಾಟಕ್ಕೆ ಅವಕಾಶ ಕೊಟ್ಟಿರುವುದು ಇನ್ನೂ ವಿಚಿತ್ರವಾಗಿದೆ!

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—Bus permits ಕೊಡತಕ್ಕವರು Road Transport Authority ಯೇ ಹೊರತು ಸರ್ಕಾರದವರು ಅದಕ್ಕೆ ಕಾರಣರಲ್ಲವೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎ. ಭೀಮಪ್ಪ ನಾಯಕ್.—ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಆ ಸ್ಥಳಕ್ಕೆ ಹೋಗಿ ಅಜಮಾಯಿಷಿ ಮಾಡಿ ಈ ಪರ್ಮಿಟ್‌ಗಳನ್ನು ಕೊಡುವುದಿಲ್ಲ. Inter-village communication ರಸ್ತೆಗಳಲ್ಲಿ ಬಸ್ ಓಡಾಡಲು ಅನುಕೂಲವಾಗಿದೆಯೇ, ಈ ಬಗ್ಗೆ ಅಧಿಕಾರಿಗಳು ಜವಾಬ್ದಾರಿಯುತವಾಗಿ ವರ್ತಿಸಿದ್ದಾರೆಯೇ ಈ ರೀತಿ ಪರ್ಮಿಟ್ ಕೊಡುವ ವಿಚಾರದಲ್ಲಿ ಸರ್ಕಾರದ ನೀತಿಗೆ ಅನುಸಾರವಾಗಿ ಅವರು ನಡೆದಿದ್ದಾರೆಯೇ ಎಂಬುದನ್ನೆಲ್ಲಾ ಸರ್ಕಾರದವರೇ ಪರಿಶೀಲಿಸಬೇಕು. ಈ ವಿಚಾರದಲ್ಲಿ ಸರ್ಕಾರದ ಪೂರ್ಣ ಜವಾಬ್ದಾರಿ ಇದೆಯೆಂದೇ ನಾನು ತಿಳಿದಿದ್ದೇನೆ. ಈ ದಿನ P.W.D. ಇಲಾಖೆ Enemy No. 1 ಎಂದು ಎನ್ನಿಸಿಕೊಳ್ಳುವುದಕ್ಕೆ ರೂಪಾಯಿಗೆ 15 ಆಣೆ ಸರ್ಕಾರದವರೇ ಕಾರಣರು. ಮುಖ್ಯವಾಗಿ ಈ ಇಲಾಖೆಯ ಅಧಿಕಾರ ವಿಕೇಂದ್ರೀಕರಣವಾಗದೇ ಇರುವುದೇ ಇದಕ್ಕೆ ಕಾರಣ. ಪ್ರತಿಯೊಂದು ಕಾಗದವೂ ಇಲ್ಲಿಗೇ ಅಂದರೆ ಸೆಕ್ರೆಟೆರಿಯಟ್ಟಿಗೇ ಬರಬೇಕು, ಇಲ್ಲೇ ವಿಲೇವಾರಿ ಆಗಬೇಕೆಂದು ವ್ಯವಸ್ಥೆ ಇಟ್ಟುಕೊಂಡಿದ್ದರೆ ಕೆಲಸ ಹೇಗೆತಾನೇ ಮುಂದುವರಿಯಲು ಸಾಧ್ಯ? ಈಗ National Highway Scheme ಎಂಬುದು ಬೇರೆ ಇದೆ. ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ತತ್ವ, ನೀತಿ ಇಟ್ಟುಕೊಂಡು ಕೆಲಸ ಮುಂದುವರಿಸಿಕೊಂಡು ಹೋಗಬೇಕಾದುದು ಅತ್ಯಗತ್ಯ. ಈ ಇಲಾಖೆಯ ಅಧಿಕಾರ ವಿಕೇಂದ್ರೀಕರಣವಾಗಿ, ಇಂಜಿನಿಯರುಗಳು, ಎಗ್ಜಿಕ್ಯೂಟಿವ್ ಇಂಜಿನಿಯರ್‌ಗಳು, ಅಂದಾಜುಗಳನ್ನು ಮಂಜೂರು ಮಾಡುವ ಅಧಿಕಾರ ಹೊಂದಿರಬೇಕು. ಈ ಬಗ್ಗೆ ಈ ಅಧಿಕಾರಿಗಳು ಆ ಅಧಿಕಾರವನ್ನು ಯಾವರೀತಿ ಚಲಾಯಿಸುತ್ತಾರೆಂದು ಪರೀಕ್ಷಿಸಿ, ಅವರೇನಾದರೂ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡರೆ ಅಂಥವರ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಅವಕಾಶ ಎದ್ದೇ ಇದೆ. ಈ ಅಧಿಕಾರಿಗಳು ಕೆಲವು ಕಡೆ ಸೊಗಸಾಗಿ ಕೆಲಸ ಮಾಡಿರುತ್ತಾರೆ; ಅಭಿನಂದನಾರ್ಹವಾದ ಕೆಲಸ ಮಾಡಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಮೋಸ ನಡೆದಿರಬಹುದು. ಅದನ್ನು ಸರಿಪಡಿಸಬೇಕು. ಈ ಇಲಾಖೆ ರಾಷ್ಟ್ರ ನಿರ್ಮಾಣ ಸಾಧನವೆಂಬುದನ್ನು ಸರ್ಕಾರದವರು ಅರಿಯಬೇಕು, ಇದಕ್ಕಾಗಿ ಒದಗಿಸಿದ ಹಣವು ವ್ಯಯವಾಗದೇ ಉಳಿಯುವುದು ಕ್ಷಮಾರ್ಹವಲ್ಲವೆಂದು ತಿಳಿಸುತ್ತೇನೆ. ಈ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸರ್ಕಾರದವರು ಇನ್ನು ಮುಂದಾದರೂ ವ್ಯವಸ್ಥಿತ ಕಾರ್ಯಕ್ರಮ ಕೈಗೊಂಡು ಇದಕ್ಕೆ ಬಹುಮಟ್ಟಿಗೆ ನೆರವು ನೀಡುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತರುವೇಕೆರೆ).—ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಶ್ರೀಮಾನ್ ಭೀಮಪ್ಪ ನಾಯಕರು ಸಕಾರಣಗಳನ್ನು ಕೊಟ್ಟಿರುವುದನ್ನು ನಾನು ಅನುಮೋದಿಸುತ್ತೇನೆ. ಈ ಇಲಾಖೆಯ ಪುನರ್ವ್ಯವಸ್ಥೆಯಂತೂ ಹೇಳತೀರದಷ್ಟು ಸಲ ಆಗಿದೆ! ಒಬ್ಬೊಬ್ಬರು ಮಂತ್ರಿಗಳ ಕಾಲದಲ್ಲಿ ಒಂದೊಂದು ರೀತಿ ಆಗಿದೆ. ಈಗಂತೂ ಒಬ್ಬರು ಡೆಪ್ಯುಟಿ ಚೀಫ್ ಇಂಜಿನಿಯರ್, ಇನ್ನೊಬ್ಬರು ಸ್ಪೆಷಲ್ ಚೀಫ್ ಇಂಜಿನಿಯರು ಈ ರೀತಿ ನಾನಾ ಹುದ್ದೆಗಳು ಏರ್ಪಟ್ಟಿವೆ. ಈ ಇಲಾಖೆಯಲ್ಲಿ ಕೆಲಸ ಮಾಡುವವರಲ್ಲಿ ಪರಸ್ಪರ ಸಹಕಾರ ಮನೋಭಾವವೇ ಇಲ್ಲ. ಸಿಬ್ಬಂದಿಯ ಖರ್ಚೇ ವಿಪರೀತವಾಗಿರುತ್ತದೆ. ಲೆಕ್ಕವಿಲ್ಲದಷ್ಟು ಮೇಲಧಿಕಾರಿಗಳಿದ್ದಾರೆ. ಚೀಫ್ ಇಂಜಿನಿಯರ್, ಡೆಪ್ಯುಟಿ ಚೀಫ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್, ಎಗ್ಜಿಕ್ಯೂಟಿವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್! ಸುಮಾರು 120 ಮಂದಿ ಅಸಿಸ್ಟೆಂಟ್ ಇಂಜಿನಿಯರುಗಳಿದ್ದಾರೆ. ಇವರು ವಹಿಸುವ ಕೆಲಸದಲ್ಲಿ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲ. ಭದ್ರಾ ತೆಗೆದುಕೊಳ್ಳಿ. ಅಲ್ಲಿಯ ಕೆಲಸಕ್ಕೆ 5 ಮಂದಿ ಸರ್ವೇಯರ್, 23 ಮಂದಿ ಸಬ್ ಓವರ್‌ಸೀಯರ್‌ಗಳಿದ್ದಾರೆ. ಈ ರೀತಿ ಲೆಕ್ಕವಿಲ್ಲದಷ್ಟು ಸಿಬ್ಬಂದಿ. ಈ ಸಿಬ್ಬಂದಿಗೆ ತಕ್ಕಹಾಗೆ ಕೆಲಸವೇನೂ ಸಾಗುತ್ತಿಲ್ಲ. ಈ ಇಲಾಖೆ ಮಾಡುವ ಕೆಲಸ ಮೇಲ್ಮಟ್ಟದ್ದಾಗಿಲ್ಲ. ಕೆಲಸದ ನಿರ್ವಹಣೆಯ ವಿಚಾರದಲ್ಲಿ ಜವಾಬ್ದಾರಿಯಿಲ್ಲ, ಆದರಮೇಲೆ ಮೇಲ್ವಿಚಾರಣೆಯಿಲ್ಲ. ಈ ಇಲಾಖೆಯಲ್ಲಿ ಕೆಲಸ ಸಮರ್ಪಕವಾದ ರೀತಿಯಲ್ಲಿ ಸುಗಮವಾಗಿ ನಡೆಯುವಂತೆ ವ್ಯವಸ್ಥೆಗೊಳಿಸಬೇಕಾದುದು ಅತ್ಯಗತ್ಯ. ಯಾವ ಕೆಲಸವನ್ನೇ ಕೈಗೊಂಡರೂ ಅದರ ನಿರ್ವಹಣೆಯ ಬಗ್ಗೆ ಒಂದು planned basis ಮೇಲೆ ಕಾರ್ಯ ನಡೆಸಿಕೊಂಡು ಹೋಗುವಂತೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು. ಇಲಾಖೆಯ ಕೆಲಸ ಕಾರ್ಯದಲ್ಲಿ coordination ಎಂಬುದಿರಬೇಕು. ನಿರ್ವಹಿಸುವ ಕೆಲಸದಲ್ಲಿಯೂ ಯಾವುದು ಅತಿಜರೂರಾದುದು ಎಂಬುದನ್ನರಿತು ಆ ಕೆಲಸಕ್ಕೆ priority ಕೊಡಬೇಕು. ಈ ರೀತಿಯ ವ್ಯವಸ್ಥೆ ಈಗ ಇಲ್ಲದಿರುವುದನ್ನು ಇರ್ಕಸಂದ್ರ ಕೆರೆ ಕಟ್ಟುವಾಗ ನಾನೇ ಕಣ್ಣಾರೆ ನೋಡಿದ್ದೇನೆ. ಆದುದರಿಂದ ಇದನ್ನು ನಾನು ಅನುಭವದಿಂದ ಹೇಳುತ್ತಿದ್ದೇನೆ.

ಸ್ಪೆಸಿಫಿಕೇಷನ್ ಪ್ರಕಾರ ಸರಿಯಾಗಿ ಕೆಲಸ ಮಾಡಿದರೆ 50—100 ವರ್ಷಗಳಾದರೂ ಅದು ಅಲ್ಲಾಡುವುದಿಲ್ಲ. ಹಾಗಿರಬೇಕಾದರೆ ಈ ರೀತಿ ಮಧ್ಯೆ ಮಧ್ಯೆ ದೋಷ ಕಾಣಬೇಕಾದರೆ ಕಾರಣವೇನು? ಇದರಲ್ಲಿ ಮುಖ್ಯವಾಗಿ ಶ್ರೀಮಾನ್ ಭೀಮಪ್ಪನಾಯಕರು ಹೇಳಿದ ಹಾಗೆ ಸರಿಯಾಗಿ ಕೆಲಸ ಆಗದೆ ಯಾರ ಮೇಲೆ ದೂರು ಬರುತ್ತದೆಯೋ ಅವರ ವಿಷಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೆ ಮಾಡುತ್ತಿಲ್ಲ. ಹಿಂದಿನ ಚರಿತ್ರೆಯೇ ನಡೆದುಕೊಂಡು ಬರುತ್ತಾ ಇದೆ. ಅದಕ್ಕೆ ಪರ್ಮಿಷನ್ ಕೊಡುತ್ತಾ ಇದ್ದೀರಿ. ಅದನ್ನು ಖಂಡಿತವಾಗಿಯೂ ಪ್ರತಿಭಟಿಸುತ್ತೇನೆ. ಈ ಇಲಾಖೆಯ ವಿಷಯದಲ್ಲಿ ಅನೇಕ ಲೋಪದೋಷಗಳಿರುವುದನ್ನು ಈ

ಮಾನ್ಯ ಸಭೆಯು ಸದಸ್ಯರೆಲ್ಲಾ ಹೇಳುತ್ತಾ ಇದ್ದಾರೆ. ಹೇಳಿದ್ದಕ್ಕೆ ಯಾವ ಬೆಲೆಯೂ ಇಲ್ಲದಂತಾಗಿದೆ. ಕೆರೆ ಒಡೆದುಹೋದರೆ 25 ಲಕ್ಷ ರೂಪಾಯಿ ಸರ್ಕಾರದವರು ಖರ್ಚು ಮಾಡಿದ್ದು ಅನ್ಯಾಯವಾಗುವುದು ಒಂದೇ ಅಲ್ಲ, ಮತ್ತೆ ಪುನಃ ಹಣ ಅದಕ್ಕೆ ಸುರಿದು ರಿಪೇರಿ ಮಾಡಬೇಕು. ರೈತರು ಮಾಡಬೇಕೆಂದರೆ ಅದು ಅಸಾಧ್ಯವಾದ ಮಾತು. ಆದ್ದರಿಂದ ನಾನು ಹೇಳುವುದು ಇಷ್ಟೆ. ಸುವ್ಯವಸ್ಥಿತವಾದ ಒಂದು ಸೂಪರ್‌ವಿಜನ್ ಇರಬೇಕು. ಸೂಪರ್‌ವಿಜನ್ ಈಗ ಇರತಕ್ಕದ್ದು ಸಾಲದು. ಆಫೀಸರುಗಳ ಸಂಖ್ಯೆ ಹೆಚ್ಚಾಗಿದೆ. Top heavy ಆಗಿ ಕಾಲ ಕಳೆಯುತ್ತಾರೆ. ಅವರನ್ನು ಕಮ್ಮಿ ಮಾಡಿ ಸಬಾರ್ಡಿನೇಟ್ ಸ್ಟ್ಯಾಫು ಜಾಸ್ತಿ ಮಾಡಿ, ಸರಿಯಾಗಿ ಕೆಲಸ ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುತ್ತೇನೆ.

ಇನ್ನೊಂದು ವಿಚಾರ ಕೌಡ್ಲೆ ಬ್ರಿಡ್ಜು ಎಂದು ಇದೆ. ಅದಕ್ಕೆ 4 ಲಕ್ಷ ರೂಪಾಯಿ ಆಗಬೇಕು. ಡಿಸ್ಟ್ರಿಕ್ಟು ಬೋರ್ಡಿನಿಂದ ಸಹಾಯ ಮಾಡಲಿಕ್ಕೆ ಸಾಧ್ಯವಿಲ್ಲ; ಆದ್ದರಿಂದ ಸರ್ಕಾರದವರೇ ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಚಿಕ್ಕನಾಯಕನಹಳ್ಳಿ ರಸ್ತೆಯಲ್ಲಿ ಹತ್ತಾರು ಸಾರಿ ತಿರುಗಾಡಿದ್ದೇನೆ. ಅಲ್ಲಿ ಸಿಮೆಂಟ್ ಕಾಂಕ್ರೀಟ್ ಮಾಡಿಲ್ಲ. ಅನೇಕ ಲಾರಿಗಳು ಮತ್ತು ಟ್ರ್ಯಾಕ್ಟರುಗಳು ಆ ರಸ್ತೆಯಲ್ಲಿ ಓಡಾಡುತ್ತಾ ಇದ್ದು ಕಲ್ಲುಗಳೆಲ್ಲಾ ಮೇಲಕ್ಕೆ ಎದ್ದಿವೆ. ಕೊನೆಪಕ್ಷ ಬಸ್ಸುಗಳು ತಿರುಗಾಡುವ 12 ಮೈಲಿಗಳಷ್ಟಾದರೂ ಸಿಮೆಂಟ್ ಕಾಂಕ್ರೀಟ್ ಮಾಡಿಕೊಡಬೇಕು; ಸಾಧ್ಯವಿಲ್ಲದೇ ಇದ್ದರೆ ಆಸ್ಫಾಲ್ಟು ಆದರೂ ಹಾಕಿಸಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇಷ್ಟು ಹೇಳಿ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು, ಮೇಲಧಿಕಾರಿಗಳನ್ನು ಕಡಿಮೆ ಮಾಡಿ ಕೆಳಗಿನ ಆಫೀಸರುಗಳಿಂದ ನಿರ್ದಿಷ್ಟವಾದ ಕೆಲಸ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

*ಶ್ರೀ ಟಿ. ನಾಗಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಲೆನಾಡು ಅಭಿವೃದ್ಧಿ ವಿಚಾರವಾಗಿ ಮಾತನಾಡುತ್ತಾ ಕೇವಲ ತರೀಕೆರೆ ವಿಚಾರದಲ್ಲಿ ಒಂದೇ ಒಂದು ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಲಕ್ಕವಳ್ಳಿ ಪ್ರಾಜೆಕ್ಟು ತೆಗೆದುಕೊಂಡ ಮೇಲೆ ತರೀಕೆರೆ ತಾಲ್ಲೂಕಿನ ವ್ಯವಹಾರಗಳು ವಿಶೇಷವಾಗಿ ಹೆಚ್ಚಾಗಿವೆ. ಆ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಸರಿಯಾದ ರಸ್ತೆಗಳೇ ಇಲ್ಲ. ಅವುಗಳಿಗೆ ಜಾಗ್ರತೆ ರಸ್ತೆ ಹಾಕಿಸಿ ಕೊಡಬೇಕು. ಅದೇ ರೀತಿ ಕೆಲವು ಭಾಗಗಳಲ್ಲಿ ಸೇತುವೆಗಳು ಅತ್ಯವಶ್ಯಕವಾಗಿ ಆಗಬೇಕಾಗಿವೆ. ಅವನ್ನು ಮಾಡಿಸಬೇಕು. ಮಲೆನಾಡಿನ ಅಭಿವೃದ್ಧಿ ಆಗಬೇಕಾದರೆ ರಸ್ತೆ ಮತ್ತು ಸೇತುವೆಗಳ ಕೆಲಸಕ್ಕೆ ಮಾನ್ಯ ರೆವಿನ್ಯೂ ಸಚಿವರು ದಯವಿಟ್ಟು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ದಾವಣಗೆರೆಗೆ 2 ಮೈಲಿ ದೂರದಲ್ಲಿರತಕ್ಕ ನಮ್ಮ ಗ್ರಾಮಕ್ಕೆ ತಾವು ಕೆಲವು ಸಲ ಬಂದು ಭೇಟಿ ಕೊಟ್ಟಿದ್ದೀರಿ. ಆ ಊರಿನ ಜನರ ತೊಂದರೆ ಎಷ್ಟಿದೆ ಎಂಬುದನ್ನು ತಾವು ಅಲ್ಲಿಗೆ ಬಂದಿದ್ದಾಗ ಅರಿಕೆ ಮಾಡಿಕೊಂಡಿದ್ದಾರೆ. ಅಲ್ಲಿ ಬಹಳ ಕಷ್ಟ ಪರಿಸ್ಥಿತಿ ಇದೆ. ಕೇವಲ ಎರಡು ಮೈಲಿ ದೂರದಲ್ಲಿರತಕ್ಕ ಆ ಗ್ರಾಮದಿಂದ ದಾವಣಗೆರೆಗೆ ಬರಬೇಕಾದರೆ ಒಂದು ದಿವಸವೆಲ್ಲಾ ಹಿಡಿಯುತ್ತದೆ. ಹೆಂಗಸರು, ಮಕ್ಕಳು ಎಷ್ಟು ಕಷ್ಟ ಪಡುತ್ತಾರೆ ಎಂಬುದನು ಹೇಳತೀರದು. ಹೆಂಗಸರು, ಮಕ್ಕಳು ಬರಬೇಕು, ಖಾಯಿಲೆಯವರು ಬರಬೇಕು, ಈ ರೀತಿ ಅನೇಕ ಕೆಲಸ ಕಾರ್ಯಗಳಿಗೆ ಅಡಚಣೆ ಆಗಿದೆ. ಆದ್ದರಿಂದ ಆ ರಸ್ತೆ ಕೆಲಸವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದಾರೆ. ಎಸ್ಟಿಮೇಟ್ ಕೂಡ ಆಗಿದೆ ಎಂದು ಕೇಳಿದೆ. ಅದನ್ನು ಆದಷ್ಟು ಜಾಗ್ರತೆ ಮಂಜೂರು ಮಾಡಿಕೊಡಬೇಕೆಂದು ಮಾತ್ರ ಹೇಳುತ್ತೇನೆ ಹೆಚ್ಚಾಗಿ ಹೇಳುವುದಿಲ್ಲ. ಎಲ್ಲ ಕಡೆಯೂ ಸಿಮೆಂಟ್ ರಸ್ತೆ ಬೇಕೆಂದು ಕೇಳುತ್ತಾ ಹೋದರೆ ಅದು ಸಾಧ್ಯವಾಗದ ಮಾತು. ಆ ರೀತಿ ನಾನು ಕೇಳುತ್ತಿಲ್ಲ. ಕೊನೆಯಪಕ್ಷ ಯಾವ ಗ್ರಾಮದ ಪಕ್ಕದಲ್ಲಿ ಮೇನ್ ರೋಡ್ ಹೋಗುತ್ತದೆಯೋ ಅಲ್ಲಿಯವರೆಗಾದರೂ ಸಿಮೆಂಟ್ ಅಥವಾ ಟಾರ್ ರಸ್ತೆ ಮಾಡಿಸಿ ಕೊಡಿ, ಇವತ್ತಿನಿಂದಲೇ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಅಷ್ಟೇ ಹೊರತು ಹೆಚ್ಚಾಗಿ ಕೇಳುವುದಿಲ್ಲ.

ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನ ಕೆಲಸ ಬಹಳವಾಗಿದೆ, ತೊಂದರೆಗಳವೆ ಎಂದು ಹೇಳುತ್ತೀರಿ. ನಾನು ಒಂದೇ ಒಂದು ಮಾತು ಹೇಳುತ್ತೇನೆ. ಏಕೆಂದರೆ ಇಷ್ಟು ಜನ ಗಂಡಸರು ಇಂಜಿನಿಯರುಗಳು ಇದ್ದೂ ಸಹ ನಮ್ಮ ಕಷ್ಟಗಳು ಪರಿಹಾರವಾಗಿಲ್ಲ. ಹೆಣ್ಣುಮಕ್ಕಳ ಕೈಗೆ ಬಂದರೆ ಅದು ಏನಾದರೂ ಸುಧಾರಿಸಿತೋ ಏನೋ ಎಂದು ನನಗೆ ಅನ್ನಿಸುತ್ತಿದೆ. ಆದ್ದರಿಂದ ನಮ್ಮ ಹೆಣ್ಣುಮಕ್ಕಳಿಗೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಕೊಡಿ. ಚೆನ್ನಾಗಿ ಅವರು ಓದುತ್ತಾರೆ. ಎಷ್ಟೇ ಕಷ್ಟವಾದರೂ ಕೂಡ ಕೆಲಸ ಮಾಡಬಲ್ಲ ಶಕ್ತಿ ಅವರಿಗಿದೆ. ಅವರು ಗಂಡಸರಿಗೆ ಯಾವುದರಲ್ಲ ಏನೂ ಕಮ್ಮಿ ಇಲ್ಲ. ಅವರಿಗೆ ಆ ಒಂದು ಅವಕಾಶ ಕಲ್ಪಿಸಿಕೊಟ್ಟರೆ ಒಂದು ದೊಡ್ಡ ಉಪಕಾರ ಮಾಡಿದಹಾಗಾಗುತ್ತದೆ. ತಮಗೂ ಸಹ ಒಂದು ಕೀರ್ತಿ ಬರುತ್ತದೆ. ಆದ್ದರಿಂದ ಸರ್ಕಾರದವರು ಅದನ್ನು ಜಾಗ್ರತೆ ಮಾಡಿಕೊಡಬೇಕೆಂದು ಅರಿಕೆ ಮಾಡಿಕೊಂಡು ನನ್ನಮಾತನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ನಾನು ಬಹಳ ಎಚ್ಚರಿಕೆಯಿಂದ ಕೇಳಿದೆ. ಪಬ್ಲಿಕ್ ವರ್ಕ್ಸ್ ಇಲಾಖೆ ಇವೊತ್ತು ಅಥವಾ ನೆನ್ನೆ ಹುಟ್ಟಿದ ಇಲಾಖೆಯಲ್ಲ. ಬಹಳ ವರ್ಷಗಳಿಂದ ಸಂಸ್ಥಾನದಲ್ಲಿ ಇದ್ದ ಒಂದು ಇಲಾಖೆ. ಬಾಕಿ ಸಂಸ್ಥಾನಗಳಲ್ಲೂ ಕೂಡ ಈ ಇಲಾಖೆಯ ಕೆಲಸ ನಡೆಯುತ್ತಾ ಇದೆ. ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರಲ್ಲ, ಅವರ ಭಾವನೆಯಲ್ಲಿ ಮೈಸೂರು ಸಂಸ್ಥಾನದಲ್ಲಿರತಕ್ಕ ಎಲ್ಲಾ ರಸ್ತೆಗಳನ್ನೂ ಎಲ್ಲಾ ಸೇತುವೆಗಳನ್ನೂ ರಿಪೇರಿ ಮಾಡತಕ್ಕ ಜವಾಬ್ದಾರಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನದು ಎಂದು ತಿಳಿದುಕೊಂಡಿದ್ದಾರೆ. ಒಬ್ಬ ಮಾನ್ಯ ಸದಸ್ಯರು ವಾಟರ್ ವರ್ಕ್ಸ್ ವಿಚಾರ ಹೇಳಿ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಲಿಲ್ಲ ಎಂದು ಹೇಳಿದರು. ಪಬ್ಲಿಕ್ ವರ್ಕ್ಸ್ ಇಲಾಖೆಗೆ ನಿರ್ದಿಷ್ಟವಾದ ಕೆಲಸಕಾರ್ಯಗಳು ಇವೆ. ಇದರಲ್ಲಿ ಕೆಲವು ರಸ್ತೆಗಳನ್ನು,—ಎಲ್ಲಾ ರಸ್ತೆಗಳನ್ನೂ ಅಲ್ಲ—ಸರಿಯಾಗಿ ಇಡತಕ್ಕ, ರಿಪೇರಿಮಾಡತಕ್ಕ ಮತ್ತು ನಿರ್ಮಾಣಮಾಡತಕ್ಕ ಜವಾಬ್ದಾರಿ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿದೆ. ಹೀಗೆಯೇ ಕೆಲವು ಸೇತುವೆಗಳನ್ನು ನಿರ್ಮಾಣ ಮಾಡತಕ್ಕ ಜವಾಬ್ದಾರಿಯೂ ಕೂಡ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಇದೆ. ಇತರ ಎಲ್ಲಾ ರಸ್ತೆಗಳು ಮತ್ತು ಸೇತುವೆಗಳನ್ನು ಕಟ್ಟಿಸತಕ್ಕ ಜವಾಬ್ದಾರಿ ರೂರಲ್ ಡೆವಲಪ್‌ಮೆಂಟ್ ಇಲಾಖೆ ಅಥವಾ ಸ್ಥಳೀಯ ಸಂಸ್ಥೆ

(ಶ್ರೀ ಕಡಿದಾಳ್ ಮಂಜಪ್ಪ.)

ಗಳಿಗೆ ಸೇರಿದೆ. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ರಸ್ತೆಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಕೆಲವರು ಟೀಕೆ ಮಾಡಿದ್ದಾರೆ. 1951ನೇ ಇಸವಿಯಲ್ಲಿ ಒಂದು ಗವರ್ನ್‌ಮೆಂಟ್ ಆರ್ಡರ್ ಆಗಿದೆ. ಅದರ ಪ್ರಕಾರ ರಸ್ತೆಗಳನ್ನು ನಾಲ್ಕು ವಿಭಾಗ ಮಾಡಿ, Iನೇ ಕ್ಲಾಸು, IIನೇ ಕ್ಲಾಸು, IIIನೇ ಕ್ಲಾಸು, IVನೇ ಕ್ಲಾಸು ಎಂದು ಹೇಳಿ ಕರೆದಿದ್ದಾರೆ. Iನೇ ಕ್ಲಾಸ್ ರಸ್ತೆ ರಿಪೇರಿ ಮಾಡತಕ್ಕ ಜವಾಬ್ದಾರಿ ಸರ್ಕಾರದ್ದು ಎಂದು ನಿಗದಿ ಮಾಡಿದ್ದಾರೆ. II, III ಮತ್ತು IVನೇ ಕ್ಲಾಸ್ ರಸ್ತೆಗಳನ್ನು ರಿಪೇರಿ ಮಾಡುವಾಗ ಅರ್ಧ ಭಾಗದ ಹಣವನ್ನು ಸ್ಥಳೀಯಸಂಸ್ಥೆಗಳು, ಇನ್ನರ್ಧ ಭಾಗದ ಹಣವನ್ನು ಸರ್ಕಾರದವರು ಕೊಡಬೇಕೆಂದು ನಿಗದಿ ಮಾಡಿದ್ದಾರೆ. ಆ ಆರ್ಡರ್ ಪ್ರಕಾರ 2,378 ಮೈಲಿಗಳನ್ನು ಸರ್ಕಾರದ ಹಣದಿಂದ ರಿಪೇರಿ ಮಾಡತಕ್ಕದ್ದು ಎಂದು ನಿಗದಿ ಆಗಿದೆ. ಇತ್ತೀಚೆಗೆ ಕೆಲವು ಕಡೆ ರಸ್ತೆಗಳು ಕೆಟ್ಟುಹೋಗಿದ್ದುದು ಸರ್ಕಾರದವರ ಗಮನಕ್ಕೆ ಬಂದನಂತರ ಈ ರೋಡ್ ರೀಕ್ಲಾಸಿಫಿಕೇಷನ್ ನೀತಿಯ ವಿಚಾರದಲ್ಲಿ ಚರ್ಚೆ ನಡೆದು ಸರ್ಕಾರದವರು ಅವರ ಜವಾಬ್ದಾರಿಯನ್ನು ಬಹುಮಟ್ಟಿಗೆ ಹೆಚ್ಚಿಸಿಕೊಂಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಹುಚ್ಚೇಗೌಡರಿಗೆ ಗೊತ್ತಿರುವಂತೆ ಜಿಲ್ಲಾ ಬೋರ್ಡಿನ ಹತೋಟಿಗೊಳಪಟ್ಟ ಅನೇಕ ರಸ್ತೆಗಳನ್ನು ಈ ದಿವಸ ಸರ್ಕಾರದವರು ತೆಗೆದುಕೊಂಡಿದ್ದಾರೆ. ಇದರ ಸಲುವಾಗಿ ಇದುವರೆಗೂ ಸರ್ಕಾರದ ಜವಾಬ್ದಾರಿ 8 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿದೆ. ಮಾನ್ಯ ಸದಸ್ಯರು ಮಾತನಾಡಬೇಕಾದರೆ ರಸೆ ಗಳನ್ನು ಉತ್ತಮಪಡಿಸಬೇಕು, ಸಿಮೆಂಟ್ ಮಾಡಿಸಬೇಕು, ಟಾರ್ ಮಾಡಿಸಬೇಕು ಎಂದು ಹೇಳುತ್ತಾರೆ. ಬಡ್ಜೆಟ್ ಮೇಲೆ ಮಾತನಾಡತಕ್ಕ ಸಮಯದಲ್ಲಿ ಅನೇಕ ಟೀಕೆಗಳನ್ನು ಮಾಡಿದ್ದಾರೆ. ಬಡ್ಜೆಟ್ ಸರಿತೂಗಿಸಬೇಕಾದರೆ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ಮಾಡಬೇಕೇ ಅಥವಾ ನಿಲ್ಲಿಸಬೇಕೇ ಟಾರ್ ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೇ ಸಾಧ್ಯವಿಲ್ಲವೇ, ಆ ರೀತಿ ವಾದ ಮಾಡುವುದು ಸರಿಯೇ ಎಂಬುದನ್ನು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಶ್ರೀ ಭೀಮಪ್ಪನಾಯಕರು ಈ ಇಲಾಖೆಯ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಹೇಳುತ್ತಾರೆ. ನಾನೂ ಒಪ್ಪುತ್ತೇನೆ. ಅಧಿಕಾರ ವಿಕೇಂದ್ರೀಕೃತವಾಗಬೇಕೆಂದು ಹೇಳಿದ್ದಾರೆ. ಇತ್ತೀಚೆಗೆ ನಾವು ಸಂಬಂಧಪಟ್ಟ ಅಧಿಕಾರದ ಮಿತಿಯನ್ನು ಇನ್ನೂ ಹೆಚ್ಚು ಮಾಡಿದ್ದೇವೆ. ಚೀಫ್ ಇಂಜಿನಿಯರಿಗೆ 15 ಸಾವಿರದವರೆಗೂ ಮಂಜೂರುಮಾಡತಕ್ಕ ಅಧಿಕಾರ ಇತ್ತು; ಈಗ 25 ಸಾವಿರದವರೆಗೂ ಹೆಚ್ಚು ಮಾಡಿದೆ. ಇನ್ನೂ ಕೂಡ ಜಾಸ್ತಿ ಮಾಡಬೇಕೆಂಬ ಯೋಚನೆ ಇದೆ. ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಮೊದಲು 10 ಸಾವಿರ ರೂಪಾಯಿಗಳವರೆಗೂ ಮಂಜೂರುಮಾಡುವ ಅಧಿಕಾರವಿತ್ತು; ಈಗ 15 ಸಾವಿರ ರೂಪಾಯಿಗಳವರೆಗೂ ಹೆಚ್ಚಿಸಿದೆ. ಎಕ್ಸಿಕ್ಯುಟೀವ್ ಇಂಜಿನಿಯರಿಗೆ 5 ಸಾವಿರ ರೂಪಾಯಿಗಳವರೆಗೂ ಇದ್ದ ಅಧಿಕಾರ ವ್ಯಾಪ್ತಿಯನ್ನು 7,500 ರೂಪಾಯಿಗಳವರೆಗೂ ಹೆಚ್ಚಿಸಿದೆ. ಟೆಂಡರ್ಸ್ ಕಾಲ್‌ಫಾರ್ ಮಾಡುವುದೂ ಕೂಡ ಮೊದಲು ಚೀಫ್ ಇಂಜಿನಿಯರಿಗೆ 25,000 ರೂಪಾಯಿಗಳವರೆಗೆ ಇತ್ತು, ಈಗ 50 ಸಾವಿರ ರೂಪಾಯಿಗೆ ಹೆಚ್ಚಿಸಿದೆ. ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಮೊದಲು 15 ಸಾವಿರ ರೂಪಾಯಿ ಇತ್ತು, ಈಗ 30 ಸಾವಿರ ರೂಪಾಯಿಗೆ ಹೆಚ್ಚಿಸಿದೆ. ಎಕ್ಸಿಕ್ಯುಟೀವ್ ಇಂಜಿನಿಯರಿಗೆ ಮೊದಲು 4,000 ರೂಪಾಯಿ ಇತ್ತು, ಈಗ 10 ಸಾವಿರ ರೂಪಾಯಿಗೆ ಹೆಚ್ಚಿಸಿದೆ. ಇನ್ನೂ ಹೆಚ್ಚು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಈ ಒಂದು ವಿಚಾರವನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಸಾರ್ವಜನಿಕರ ಹಣ ಪೋಲಾಗದಂತೆ ನೋಡಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಅದನ್ನು ಮನಗಾಣಬೇಕು.

ಆಮೇಲೆ ಎಕ್ವಿಪ್‌ಮೆಂಟು ಮುಂತಾದುವನ್ನು ಸರ್ಕಾರ ಒದಗಿಸಿಲ್ಲ ಎಂದು ಹೇಳಿದರು. ಈ ವರ್ಷ ಅನೇಕ ಲಕ್ಷ ರೂಪಾಯಿಗಳ ಎಕ್ವಿಪ್‌ಮೆಂಟಿಗೆ ಆರ್ಡರ್ ಕೊಟ್ಟಿದ್ದೇವೆ. Road rollers ನಮ್ಮ ದೇಶದಲ್ಲಿ ಸಿಕ್ಕುವುದಿಲ್ಲ, ಪರದೇಶದಿಂದ ಬರಬೇಕು, ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ಎಕ್ಸ್‌ಪ್ಲೈರ್ ಮಾಡಬೇಕು, ಅವರ ಮುಖಾಂತರ ತರಿಸಬೇಕು; ಇಲ್ಲದೇ ಇದ್ದರೆ ತಾಪೇ ಪ್ರಶ್ನೆ ಹಾಕುತ್ತೀರಿ. ಇದರಿಂದ ನಿಧಾನವಾಗುತ್ತದೆ. ಶ್ರೀಮತಿ ಸುಬ್ಬಮ್ಮನವರು ಸೇತುವೆ ವಿಚಾರ ಪ್ರಸ್ತಾಪಮಾಡಿದರು. ನಿಜ, ಮಂಜೂರಾಗಿ 4 ವರ್ಷಗಳಾದವು. ಒಂದೊಂದು ಸಾರಿ ಟೆಂಡರ್ ಬಂದಾಗಲೂ ಟೆಂಡರು ಕಾನೂನು ಪ್ರಕಾರ ಇರಲಿಲ್ಲ, ಆದ್ದರಿಂದ ಹೊಸದಾಗಿ ಟೆಂಡರ್ ಕರೆಯಬೇಕೆಂದು ಹೇಳಿ ಆಜ್ಞೆ ಮಾಡಿದ್ದೇವೆ. ಟೆಂಡರ್ ಕರೆಯಬೇಕೆಂದರೆ ಬಹಳ ಕಾಲ ಹಿಡಿಯುತ್ತದೆ. ಟೆಂಡರ್ ಕೊಡಬೇಡಿ ಎಂದರೆ ಅದು ಸಾಧ್ಯವಿಲ್ಲ. ಈ ರೀತಿ ಕೆಲವು ಸಂದರ್ಭಗಳಲ್ಲಿ ಕಾಲವಿಳಂಬವಾಗುತ್ತದೆ.

11-30 A.M.

ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ಪಬ್ಲಿಕ್ ಎನಿಮಿ ನಂಬರ್ ಒನ್ ಎಂದು ಹೇಳಿದ್ದಾರೆ. ಈ ಇಲಾಖೆಯಲ್ಲಿ ಕೆಲಸ ಮಾಡಿರುವುದನ್ನು ಗಮನಿಸಿದರೆ ಬೇಕಾದಷ್ಟು ಕೆಲಸವಾಗಿದೆ; ದಕ್ಷರಾದ ಅಧಿಕಾರಿಗಳೂ ಇದ್ದಾರೆ. ಆದರೆ ಅಲ್ಲಲ್ಲಿ ಕೆಲವರು ಸ್ವಲ್ಪ ದ್ರೋಹ ಮಾಡಿರಬಹುದು. ಅವರನ್ನು ಹಿಡಿದು ಕೊಡುವ ಜವಾಬ್ದಾರಿ ಸರ್ಕಾರಕ್ಕೆ ಎಷ್ಟು ಮಟ್ಟಿಗಿದೆಯೋ ಸಾರ್ವಜನಿಕರಿಗೂ ಅಷ್ಟೇ ಇದೆಯೆಂದು ಮನವಿಮಾಡಿಕೊಳ್ಳುತ್ತೇನೆ. ಬರೀ ಅಸ್ಪಷ್ಟವಾಗಿ ಟೀಕೆ ಮಾಡುವುದರಿಂದ ಯಾವ ಇಲಾಖೆಯು ದಕ್ಷತೆಯೂ ಉತ್ತಮವಾಗುವುದಿಲ್ಲ. ಸಾರ್ವಜನಿಕರ, ಅದರಲ್ಲೂ ಮುಖ್ಯವಾಗಿ ಶಾಸನಸಭಾ ಸದಸ್ಯರಾದ ತಮ್ಮಗಳ ಜವಾಬ್ದಾರಿ ಬಹಳ ಮಟ್ಟಿಗಿದೆಯೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತೇನೆ.

Mr. SPEAKER.—The question is:

"That a sum not exceeding Rs. 3,14.82,943 be granted to the Government to defray the charges which will come in course of payment during the year ending 31st day of March 1955, in respect of 'Civil Works'."

The motion was adopted.

DEMAND No. 30.—FAMINE RELIEF

54. FAMINE

Mr. SPEAKER.—Motion moved:

"That a sum not exceeding Rs. 31,10,000 be granted to the

Government to defray the charges which will come in course of payment during the year ending 31st day of March 1955, in respect of 'Famine Relief'."

*ಶ್ರೀ ಬಿ. ವೈ. ನೀಲೇಗೌಡ (ಪಾಂಡವಪುರ).—ಸ್ವಾಮಿ, ಈ ಸಭೆಯ ಮುಂದಿರುವ ಡಿಮ್ಯಾಂಡಿಗೆ ಬೆಂಬಲ ಕೊಡುತ್ತಾ ಸರ್ಕಾರಕ್ಕೆ ಹಣಕಾಸಿನ ಪರಿಸ್ಥಿತಿ ಎಷ್ಟೋ ಕಷ್ಟವಾಗಿದ್ದರೂ ಬಡ್ಜೆಟ್ಟಿನಲ್ಲಿ ಧೈರ್ಯವಾಗಿ, ಉದಾರ ಭಾವನೆಯಿಂದ ಮುಖ್ಯವಾದ ಬಾಬುಗಳಿಗೆ ಹಣವನ್ನು ಮಂಜೂರುಮಾಡಿರುವುದಕ್ಕಾಗಿ ತಮ್ಮ ಮುಖೇನ ವಂದನೆಗಳನ್ನರ್ಪಿಸುತ್ತೇನೆ. ಉದಾತ್ತ ಧ್ಯೇಯದಿಂದ ಲಕ್ಷಾಂತರ ರೂಪಾಯಿಗಳ ಹಣವನ್ನು ಈ ರೀತಿಯಾಗಿ ಒದಗಿಸಿದ್ದರೂ ಅನೇಕ ವೇಳೆ ಅವರ ಧ್ಯೇಯ ಈಡೇರುವುದಕ್ಕೆ ಸಾಧ್ಯವಾಗಿಲ್ಲ. ಈ ವಿಚಾರದಲ್ಲಿ ಒಂದೆರಡು ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಹೀಗೆ ನಿದರ್ಶನಗಳನ್ನು ಹೇಳುವಾಗ ಸರ್ಕಾರವನ್ನು ಟೀಕೆ ಮಾಡಬೇಕೆಂಬ ಉದ್ದೇಶವಿಲ್ಲ. ನನ್ನ ಮುಖ್ಯೋದ್ದೇಶವಾದರೂ ಸರ್ಕಾರದ ಗಮನಕ್ಕೆ ಇಂಥ ನಿದರ್ಶನಗಳು ಬಾರದಿದ್ದರೆ ತಮ್ಮ ಮುಖೇನ ತರೋಣ ಎಂಬುದು. ನಮ್ಮ ಪಾಂಡವಪುರ ತಾಲ್ಲೂಕಿನಲ್ಲಿ ಸುಮಾರು 8-10 ವರ್ಷಗಳಿಂದ ಬೇಕಾದಷ್ಟು ಹಣ ಖರ್ಚುಮಾಡಿರುವುದಾಗಿ ಅನೇಕ ವೇಳೆ ಮಾನ್ಯ ಸಚಿವರು ಹೇಳಿರುವುದನ್ನು ನಾನು ಕೇಳಿದ್ದೇನೆ. ಆದರೆ ಮೂರು ಕಾಸೂ ಕೂಡ ಖರ್ಚು ಮಾಡಿಲ್ಲ. ಈ ಸಾಲಿನಲ್ಲಿ ಮಾತ್ರ ಕೇವಲ 1—2 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ವಿಷಯವನ್ನು ಮನವಿ ಮಾಡಿದಾಗ 'ಬೇಕಾದಷ್ಟು ಹಣ ಕೊಟ್ಟಿದ್ದೇವೆ, ಆದರೆ ಅದು ಖರ್ಚಾಗುತ್ತಿಲ್ಲ' ಎಂದು ಮಂತ್ರಿಗಳು ಹೇಳಿದರು. ಅದನ್ನು ಒಪ್ಪುತ್ತೇನೆ. ಕೊಟ್ಟ ಹಣ ಖರ್ಚಾಗದ ವಿನಾ ಜನರ ಕಷ್ಟ ತಪ್ಪುವ ಹಾಗಿಲ್ಲ. ಆದರೆ ಏಕೆ ಖರ್ಚು ಮಾಡಿಲ್ಲವೆಂಬುದನ್ನು ಮಾನ್ಯ ಮಂತ್ರಿಗಳು ತೀವ್ರವಾಗಿ ವಿಮರ್ಶೆ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಕೆಲವು ಅಧಿಕಾರಿಗಳು ಹಣ ಖರ್ಚು ಮಾಡಬೇಡಿ ಎಂದು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಹೇಳಿರುವ ನಿದರ್ಶನ ಕೊಡಬಹುದು. ಹೀಗೆ ಖರ್ಚು ಮಾಡದೆ ಉಳಿದಿರುವುದನ್ನು ವರ್ಷ ಮುಗಿಯುತ್ತಾ ಬಂದಾಗ 'ಹಣ ಖರ್ಚಾಗಿಲ್ಲ, ಬೇರೆ ತಾಲ್ಲೂಕುಗಳಿಗೆ ಅದನ್ನು ವರ್ಗಾಯಿಸಿ' ಎಂದು ಹೇಳಿ ಅಲ್ಲಿ ಖರ್ಚು ಮಾಡಿದ್ದಾರೆಂದು ಗೊತ್ತಾಗಿದೆ. ಇಷ್ಟೇ ಅಲ್ಲದೆ ತಕಾವಿ ಸಾಲ ಕೊಡಬೇಕಾದರೆ ಸ್ಥಳೀಯ ಅಧಿಕಾರಿಗಳಿಗೆ ಕೆಲವು ಜಿಲ್ಲಾಧಿಕಾರಿಗಳು 'ಯಾವ ಪ್ರಪೋಸಲ್ಲನ್ನೂ ಕಳುಹಿಸಬೇಡಿ, ಹಾಗೇ ಇಡಿ' ಎಂದು ಹೇಳಿ ವರ್ಷಾಖೈರಾಗುತ್ತಾ ಬಂದಾಗ ಹಣ ಖರ್ಚಾಗದಿರುವುದರಿಂದ ಬೇರೆ ಹೆಚ್ಚಾಗಿ ಡಿಮ್ಯಾಂಡಿರುವ ತಾಲ್ಲೂಕುಗಳಿಗೆ ವರ್ಗಮಾಡಿರುವುದು ತಿಳಿದು ಬಂದಿದೆ. ಸ್ವಾಮಿ, ಸಾರ್ವಜನಿಕರ ಕ್ಷೇತ್ರದಲ್ಲಿ ನನಗಿಂತಲ್ಲೂ ತಮಗೆ ಹೆಚ್ಚಾದ ಅನುಭವವಿದೆ. ಕೇವಲ ಸರ್ಕಾರದ ನೀತಿ, ತತ್ವ ಮತ್ತು ಕಾನೂನುಗಳನ್ನು ಜಾರಿಗೆ ತರುವಾಗ ದೊಡ್ಡ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಸಾರ್ವಜನಿಕರನ್ನು ನೋಡಿಕೊಳ್ಳದೆ ಹೋದರೆ ಅಂಥ ಅಧಿಕಾರಿಗಳಿಗೆ ಗೌರವ ಎಷ್ಟು ಮಟ್ಟಿಗೆ ದೊರೆಯುತ್ತದೆ, ಅವರಲ್ಲಿ ನಂಬಿಕೆ ಹೇಗೆ ಬರುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ನನಗಂತೂ ಇಂಥ ಅಧಿಕಾರಿಗಳಲ್ಲಿ ನಂಬಿಕೆಯಿಲ್ಲ. ಹೀಗೆ ಮಾಡಿದ್ದೇ ಆದರೆ ಕೇವಲ ಅನಕ್ಷರಸ್ಥರಿಗೆ, ಬಡವರಿಗೆ ಅಧಿಕಾರಿಗಳ ವಿಷಯದಲ್ಲಿ ಹೇಗೆ ನಂಬಿಕೆ ಬರಲು ಸಾಧ್ಯವೆಂಬುದನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಇಂಥ ಅಧಿಕಾರಿಗಳನೇಕರಿದ್ದಾರೆ. ದಕ್ಷರೂ ಅನೇಕರಿದ್ದಾರೆ, ಅನೇಕರು ಬೇರೆ ದೇಶಗಳಿಗೆ ಹೋಗಿ ಒಳ್ಳೆಯ ಹೆಸರು ಪಡೆದು ಬಂದಿದ್ದಾರೆ. ಆದರೂ ಕೂಡ ನಾನು ಹೇಳಿದಂಥವರೂ ಅನೇಕರಿದ್ದಾರೆ. ಅವರ ಮೇಲೆ ತೀವ್ರ ಕ್ರಮ ಕೈಕೊಳ್ಳಬೇಕು. ಅದಕ್ಕೆ ಸರ್ಕಾರದವರು ಜವಾಬ್ದಾರರೆಂದು ಹೇಳುವುದಿಲ್ಲ. ನಮ್ಮ ಹಿಂದಿನವರು ಆ ಅಧಿಕಾರಿಗಳನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದಾರೆ. ಈಗ ಅದನ್ನು ಸರಿಪಡಿಸಲು ಯಾವುದಾದರೂ ನಿರ್ದಿಷ್ಟ ಕಾರ್ಯಕ್ರಮ ಕೈಕೊಂಡು ನಿರ್ದಾಕ್ಷಿಣ್ಯವಾಗಿ ತಪ್ಪು ಮಾಡಿದವರನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಮನೆಗೆ ಕಳುಹಿಸಬೇಕು. ಕೆಡಿಸುವವನು ಬದುಕಿಸುವವನು ದೇವರು. ಕೇವಲ ಅಧಿಕಾರಿಗಳು ಕೆಡಿಸುವುದಕ್ಕಾಗುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಮಾತ್ರವಲ್ಲದೆ ಇಂಥ ಅಧಿಕಾರಿಗಳು ಎಲ್ಲಿ ಕೈಗೆ ಸಿಕ್ಕಿದರೂ ನಿರ್ದಾಕ್ಷಿಣ್ಯವಾಗಿ ತನಿಖೆಮಾಡಿ ಧೈರ್ಯದಿಂದ ಕ್ರಮ ತೆಗೆದುಕೊಳ್ಳಬೇಕು. ನಮ್ಮ ತಾಲ್ಲೂಕಿನಲ್ಲಿ 10 ವರ್ಷಗಳಿಂದ ಹಣವಿದ್ದರೂ ಕೇವಲ 2 ಸಾವಿರ ರೂಪಾಯಿಗಳನ್ನು ಕೂಡ ಖರ್ಚುಮಾಡಿಲ್ಲ. ಆದ್ದರಿಂದ ಮುಂದಾದರೂ ಉಪಕಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಚ್. ಎಸ್. ರುದ್ರಪ್ಪ (ಹೊನ್ನಾಳಿ).—ಸ್ವಾಮಿ, ಈ ಸಂಬಂಧದಲ್ಲಿ ಎರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಕ್ಷಾಮ ಹೆಚ್ಚಾಗಿದ್ದು ಈ ವರ್ಷ ಮಳೆಯಾಗಿದೆಯೆಂದು ಎಲ್ಲರಿಗೂ ಗೊತ್ತಾಗಿದ್ದರೂ ಮಳೆ ಹೆಚ್ಚಾಗಿ ಅನೇಕ ತಾಲ್ಲೂಕುಗಳಲ್ಲಿ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದವರು ಇದಕ್ಕೆ ಯಾವ ಯಾವ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನಾವು ಹೇಳಬೇಕಾದದ್ದು ಅತ್ಯಾವಶ್ಯಕ. ಇದಕ್ಕಾಗಿ 31 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಕೊಟ್ಟಿದ್ದಾರೆ. ಈಗ ಇಂಡಿಯಾ ಸರ್ಕಾರದವರೂ ಕ್ಷಾಮನಿವಾರಣೆಗಾಗಿ ಹೆಚ್ಚು ಗಮನಕೊಡುತ್ತಿದ್ದಾರೆ. ಅದನ್ನು ತಾವು ಯಾವ ರೀತಿಯಲ್ಲಿ ಉಪಯೋಗಮಾಡಬೇಕೆಂದರೆ ನೀರಾವರಿ ವಿಷಯದಲ್ಲಿ ಹೆಚ್ಚಾಗಿ ಖರ್ಚುಮಾಡಬೇಕು. ಹಾಗೆಮಾಡಿದರೆ ದೇಶವನ್ನು ಸಂರಕ್ಷಿಸುವುದಕ್ಕಾಗುತ್ತದೆಂದು ಕಾಣುತ್ತದೆ. ಹೋದಸಲ ರಸ್ತೆಗಳಿಗಾಗಿ ಬಹಳ ಹಣ ಖರ್ಚಾಗಿದೆ. ಈ ವರ್ಷದ ಕಾರ್ಯಕ್ರಮವಾಗಿ ಈ ಹಣವನ್ನು ನೀರಾವರಿ ಸೌಕರ್ಯಕ್ಕೆ ಖರ್ಚುಮಾಡಬೇಕು. ಯಾವ ಯಾವ ತಾಲ್ಲೂಕುಗಳಲ್ಲಿ ಕ್ಷಾಮ ಬರುತ್ತದೋ ಅಲ್ಲಿ ಕೆರೆಗಳನ್ನು ಜಾಗ್ರತೆಯಾಗಿ ಕಟ್ಟಬೇಕಾದದ್ದು ಬಹಳ ಆವಶ್ಯಕ. ಈಗ ಸೊರಬ, ಶಿಕಾರಿಪುರ ತಾಲ್ಲೂಕುಗಳಲ್ಲಿರುವ ಕೆರೆಗಳನ್ನು ದುರಸ್ತು ಮಾಡಬೇಕೆಂದಿದ್ದೀರಿ. ಆದರೆ ಸೆಪ್ಟಂಬರ್ ಮತ್ತು ಅಕ್ಟೋಬರ್ ಹೊತ್ತಿಗಾದರೂ ಅಲ್ಲಿಗೆ ಈ ಸಹಾಯ ಒದಗಬೇಕು. ಹಾಗೆ ಮಾಡದೆ ಹೋದರೆ, ಅಲ್ಲಿರುವ ಕೆರೆಕಟ್ಟೆ ದುರಸ್ತು ಮಾಡದಿದ್ದರೆ ಜೂನ್ ಫಸಲು ನಷ್ಟವಾಗುತ್ತದೆ. ಆದ್ದರಿಂದ ಅಲ್ಲಿ ಜಾಗ್ರತೆ ಕೆರೆ ರಿಪೇರಿಮಾಡಿ ಫಸಲಿಗೆ ನೀರು ಕೊಡುವುದಕ್ಕೆ ಏರ್ಪಾಡು ಮಾಡಬೇಕಾದದ್ದು ಸೂಕ್ತವಾದುದು. ಈ ಕೆರೆಗಳು ನಾದುರಸ್ತಾಗಿರುವುದನ್ನು ನಾನು ಅನೇಕ ಕಡೆ ನೋಡಿದ್ದೇನೆ. ಈ ಕೆರೆಗಳ ರಿಪೇರಿಗಾಗಿ ಸರ್ಕಾರದವರು ಒದಗಿಸುವ ದ್ರವ್ಯಸಹಾಯ ಏನೂ ಸಾಲದು. ಈ ಹಣದ ಹಂಚಿಕೆ ಹೊನ್ನಾಳಿ ತಾಲ್ಲೂಕಿಗೆ ಯಾವ ರೀತಿ ಆಗಿದೆ ಎಂಬುದನ್ನು ತಾವು ಪರಿಶೀಲಿಸಿ ನೋಡಬೇಕು. ಸಾಲದುದಕ್ಕೆ ಮಳೆ ವಿಷ

(ಶ್ರೀ ಎಚ್. ಎಸ್. ರುದ್ರಪ್ಪ.)

ರೀತವಾಗಿ ಬಂದು ಅಲ್ಲಿನ ಕೆರೆ ಬಹಳ ಅವ್ಯವಸ್ಥೆಗೆ ಬರಲು ಕಾರಣವಾಗಿದೆ. ಸರ್ಕಾರದವರು ಕೆರೆಗಳ ದುರಸ್ತಿನ ಕೆಲಸದ ಬಗ್ಗೆ ವರ್ಷ ವರ್ಷವೂ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡು ಅದರಂತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಇದಕ್ಕಾಗಿ ಆಯಾ ಜಿಲ್ಲೆಯ ಅವಶ್ಯಕತೆಯನ್ನನುಸರಿಸಿ ಸೂಕ್ತ ರೀತಿಯ ಗ್ರಾಂಟನ್ನು ಸಹ ಒದಗಿಸಿ ಈ ಬಗ್ಗೆ ದೇಶಾದ್ಯಂತ ತ್ವರಿತ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ. (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಕ್ಷಾಮ ಪರಿಹಾರ ಸಂಬಂಧದಲ್ಲಿ ಈ ಎರಡು ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚುಮಾಡಿರುತ್ತಾರೆಂಬ ಬಗ್ಗೆ ಅನೇಕ ಸಂದರ್ಭಗಳಲ್ಲಿ ಮಾನ್ಯ ಸಭೆಯಲ್ಲಿ ಅಂಕಿಅಂಶಗಳನ್ನು ಕೊಟ್ಟಿದೆ. ಆದುದರಿಂದ ಅದರ ಗೊಡವೆಗೆ ಪುನಃ ಹೋಗದೆ, ಈ ಬಾಬಿಗಾಗಿ ಒಂದು ಕೋಟಿಗಿಂತ ಹೆಚ್ಚು ಖರ್ಚಾಗಿದೆ ಎಂದು ಹೇಳಿದರೆ ಸಾಕಾಗಿದೆಯೆಂದು ಅಭಿಪ್ರಾಯಪಡುತ್ತೇನೆ. ಶ್ರೀ ನೀರ್ಲೇಗೌಡರು ಮಾತನಾಡುವಾಗ ಪಾಂಡವಪುರ ತಾಲ್ಲೂಕಿನಲ್ಲಿ ಈ ಬಾಬಿಗಾಗಿ ಹಣವನ್ನೊದಗಿಸಿದ್ದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಖರ್ಚುಮಾಡಿಲ್ಲವೆಂದು ತಿಳಿಸಿದರು. ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಆದರೂ ಈ ವಿಚಾರವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡಿರುತ್ತಾರೆಂದು ಮಾತ್ರ ತಿಳಿಸುತ್ತೇನೆ. ಈ ಕ್ಷಾಮಪರಿಹಾರಕಾರ್ಯಕ್ಕಾಗಿ ಇಂಡಿಯಾ ಸರ್ಕಾರದವರು ಸಹ ಸ್ವಲ್ಪ ಹಣವನ್ನು ಸಾಲದ ರೂಪವಾಗಿ ಕೊಡತಕ್ಕ ನಿರೀಕ್ಷೆ ಇದೆ. ಈ ದಿನ ನಾನಾ ಕಡೆಗಳಲ್ಲಿ ನೀರಾವರಿ ಕಾಮಗಾರಿ ಯೋಜನೆ ಆಗಬೇಕು ಎಂಬ ವಿಚಾರ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ.

ಹೊನ್ನಾಳಿ ತಾಲ್ಲೂಕು ವಿಚಾರವನ್ನು ಶ್ರೀ ಎಚ್. ಎಸ್. ರುದ್ರಪ್ಪನವರು ಪ್ರಸ್ತಾಪಿಸಿದರು. ಅಲ್ಲಿ ಕ್ಷಾಮಪರಿಸ್ಥಿತಿ ಕಂಡುಬಂದಲಾಗಾಯ್ತು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇನ್ನು ಆ ತಾಲ್ಲೂಕಿನಲ್ಲಿ ಕ್ಷಾಮಪರಿಹಾರ ಕಾರ್ಯವನ್ನು ಕೈಗೊಳ್ಳಬೇಕಾದ ಆವಶ್ಯಕತೆ ಕಂಡುಬಂದರೆ ಸರ್ಕಾರದವರು ಸಿದ್ಧವಾಗಿದ್ದಾರೆಂದು ಭರವಸೆ ಕೊಡುತ್ತೇನೆ. ಅಲ್ಲದೆ, ಅತ್ಯವಶ್ಯಕವಾದ ಅಣೆಕಟ್ಟು ರಿಪೇರಿಗಳ ಬಗ್ಗೆ ಸರ್ಕಾರದವರು ತೀವ್ರ ಗಮನವನ್ನು ಕೊಡುತ್ತಾರೆಂದು ಭರವಸೆ ಕೊಡುತ್ತೇನೆ.

ಒಟ್ಟಿನಲ್ಲಿ ಹೇಳುವುದಾದರೆ, ಕ್ಷಾಮಪರಿಹಾರ ಸಂಬಂಧದಲ್ಲಿ ಮೈಸೂರು ಸರ್ಕಾರ ಕೈಗೊಂಡಿರತಕ್ಕ ಕಾರ್ಯಕ್ರಮ ಬಹಳ ಯಶಸ್ವಿಯಾಗಿ, ಸಮರ್ಪಕವಾಗಿ ನಡೆದಿದೆ ಎಂದು ಧೈರ್ಯದಿಂದ ಹೇಳುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರು ಜಿಲ್ಲೆಯಲ್ಲಿನ ಕೆರೆಗಳ ಕಾಮಗಾರಿ ವಿಚಾರ ಪ್ರಸ್ತಾಪಿಸಿದೆ. ಆ ಬಗ್ಗೆ ಏನುಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆ.

Mr. SPEAKER.—The question is:

"That a sum not exceeding Rs. 31,10,000 be granted to the Government to defray the charges which will come in course of payment during the year ending 31st day of March 1955, in respect of 'Famine Relief'."

The motion was adopted.

DEMAND No. 33—STATIONERY AND PRINTING

56. STATIONERY AND PRINTING.

Mr. SPEAKER.—Motion moved:

"That a sum not exceeding Rs. 22,02,000 be granted to the Government to defray the charges which will come in course of payment during the year ending 31st day of March 1955, in respect of 'Stationery and Printing'."

Sri S. SRINIVASA IYENGAR (T.-Narsipur).—What about Demand No. 31 ?

Mr. SPEAKER.—I have already said it is not admitted. There will not be sufficient time.

Sri S. SRINIVASA IYENGAR.—If only one minute is given I will take it up, Sir.

Mr. SPEAKER.—Let us see. Let us go on with the demands fixed up already.

Sri R. ANANTARAMAN (Chamarajapet).—I have sent a cut motion on the demand to raise a debate on the need of printing Mysore Acts and Codes and making them available easily to the members and the public. Ever since I came to this august House I have been asking the Hon'ble Ministers to get these Acts and Codes printed and make them available for the public and members as well. We lawyers and also legislators have been very much inconvenienced for want of these books. I went to the Press and asked them whether they are available, to find out whether our Ministers have fulfilled their promises made during the previous occasions. I was informed that they are not available for sale. These Revenue Acts are very important and they are not available at all. Many lawyers have made report to the Law Association that these books, which are very valuable for them in these days, have got to be printed and sold. I do not know why the Director of Printing has

not made up his mind to get them printed. If any one starts his lawyer's profession, he must hunt for these books. So I request the Government to see that these books are printed as early as possible. I wish that there should be no discussion upon this subject during the next session. I wish Government to bestow their attention and to see that these Acts and Codes are printed.

Sri S. SRINIVASA IYENGAR.—I oppose the demand. Text books that are printed by the Government Press and the forms required by the local bodies are not being properly distributed at present. The requirements of the local bodies have to be obtained at the Bangalore Central Press. It would be better if the Government Press in Bangalore arranged for the sale of these text books, forms and bill books necessary for the local bodies at district headquarters. Now, what is happening is, most of them are not available. The present method of selling is by commission agents. The commission agents do not even get the supply of text books when they are needed urgently. They say that they are supplied in small quantities only and therefore the books are not readily available. Instead of paying commission, I would urge on the Government to think of establishing sales depots in district headquarters and arrange for the supply of the several Acts, Codes, text-books, and forms to the public in time and properly.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಈ ಪಠ್ಯ ಪುಸ್ತಕಗಳ ವಿಚಾರದಲ್ಲಿ ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ. ಈ ಪಠ್ಯ ಪುಸ್ತಕಗಳು ಹುಡುಗರಿಗೆ ಸರಿಯಾಗಿ ದೊರೆಯುತ್ತಿಲ್ಲ. ಈ ಪಠ್ಯ ಪುಸ್ತಕಗಳು ದೊರೆಯದೆ ಇದ್ದರೆ ಉಪಾಧ್ಯಾಯರುಗಳಿಗೆ ಪಾಠ ಹೇಳಿಕೊಡುವುದೂ ಕಷ್ಟ, ವಿದ್ಯಾರ್ಥಿಗಳು ಪಾಠ ಓದುವುದೂ ಕಷ್ಟ. ಈ ಪಠ್ಯ ಪುಸ್ತಕಗಳನ್ನು ಮುದ್ರಣ ಮಾಡಿಸತಕ್ಕ ವಿಚಾರದಲ್ಲಿ ಸರಿಯಾದ ವ್ಯವಸ್ಥೆ ಇದುವರೆಗೆ ನಡೆದಿಲ್ಲ. ಕೆಲವು ಪ್ರೈವೇಟ್ ಪ್ರೆಸ್‌ಗಳಿಗೆ ಮುದ್ರಣ ಮಾಡಲು ಕೊಟ್ಟಿರುವ ಪುಸ್ತಕಗಳು ಸಕಾಲದಲ್ಲಿ ಮುದ್ರಿತವಾಗಿವೆಯೇ ಅಥವಾ ಇಲ್ಲವೇ ಎಂಬುದನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಮತ್ತು ಈ ಪಠ್ಯ ಪುಸ್ತಕಗಳು ಆಕರ್ಷಣೀಯವಾಗಿಲ್ಲ. ಇವು ಆಕರ್ಷಣೀಯವಾಗಿ, ಅಂದವಾಗಿ, ಮನರಂಜಕವಾಗಿ ಮುದ್ರಿತವಾಗಿದ್ದರೆ ವಿದ್ಯಾರ್ಥಿಗಳ ಮನಸ್ಸಿಗೆ ಉಲ್ಲಾಸವಾಗಿರುತ್ತದೆ. ಈಗಿನ ಪಠ್ಯ ಪುಸ್ತಕಗಳ ಆಕಾರ ನೋಡಿದರೆ ಹಿರಿಯರಿಗೂ ಸಹ ಬೇಜಾರಾಗುತ್ತದೆ. ಅಲ್ಲದೆ ಈಗಿನ ಪಠ್ಯ ಪುಸ್ತಕಗಳಲ್ಲಿ ಮುದ್ರಣ ದೋಷಗಳು ಬಹಳವಾಗಿವೆ. ಇವುಗಳಲ್ಲಿ ಉಪಯೋಗಿಸುವ ಸಂಸ್ಕೃತ ಪದಗಳನ್ನು ನೋಡಿದುದೇ ಆದರೆ, ಕಾಗುಣಿತ, ಮಹಾಪ್ರಾಣ, ಅಲ್ಪಪ್ರಾಣ, ದೀರ್ಘ, ಹ್ರಸ್ವ—ಇವುಗಳಲ್ಲಿ ದೋಷಗಳು ಎದ್ದುಕಾಣುತ್ತವೆ. ಇವುಗಳನ್ನೆಲ್ಲಾ ಸರಿಪಡಿಸಬೇಕಾದುದು ಅಗತ್ಯ. ಅಲ್ಲದೆ, printing department ನಲ್ಲಿ proof corrections ಕನ್ನಡ ಮತ್ತು ಸಂಸ್ಕೃತದಲ್ಲಿ ತಕ್ಕಷ್ಟು ಯೋಗ್ಯತೆ ಪಡೆದವರಿರುವಂತೆ ವ್ಯವಸ್ಥೆಮಾಡಬೇಕು.

ಎರಡನೆಯದು ಕಾಲಕ್ಕೆ ಸರಿಯಾಗಿ ಪುಸ್ತಕಗಳು ಒದಗಬೇಕು. ಅದಕ್ಕೆ ಒಂದು ಪ್ಲಾನ್ ಅನುಸರಿಸಿ ಎಷ್ಟು ವಿದ್ಯಾರ್ಥಿಗಳ ಸಂಖ್ಯೆ ಇದೆ, ಎಷ್ಟು ಪುಸ್ತಕಗಳು ಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ವಿಷಯಕ್ಕೆ ಸರಿಯಾಗಿ ಗಮನ ಕೊಡಬೇಕು. ಏಕೆಂದರೆ, ಇದು ಪ್ರಜಾಪ್ರಭುತ್ವದ ಯುಗ. ಹೆಚ್ಚು ಹೆಚ್ಚು ವಿದ್ಯಾಭ್ಯಾಸ ಹರಡಬೇಕೆಂಬ ಉದ್ದೇಶ ಸರ್ಕಾರದವರಿಗೆ ಇದೆ. ಇದಕ್ಕೆ ಸರಿಯಾದ, ವ್ಯಾಕರಣ ಶುದ್ಧವಾದ ಭಾಷೆಯಿಂದ, ಒಳ್ಳೆಯ ಶೈಲಿಯಿಂದ ಕೂಡಿದ ಪುಸ್ತಕಗಳು ಬೇಕಾಗುತ್ತವೆ. ನಮ್ಮ ಸಂಸ್ಕೃತಕ್ಕೆ ಹೆಚ್ಚು ಗಮನವನ್ನು ಕೊಡುತ್ತಾ ಇದ್ದೀರಿ ; ಸಂಸ್ಕೃತದಲ್ಲಿ ಭಾಷಾ ಶುದ್ಧಿ ಮುಂತಾದ ವಿಷಯಗಳಿಗೆ ಹೆಚ್ಚು ಗಮನ ಕೊಡಬೇಕು. ಇಷ್ಟುಮಾತ್ರ ಹೇಳಿ ಈಗಿರತಕ್ಕ ನ್ಯೂನತೆಯನ್ನು ಸರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

Dr. R. NAGAN GOWDA (Minister for Agriculture).—Mr. Speaker, Sir, regarding the very important points that were made by the last speaker, I am entirely in agreement with him that we should have very nice and attractive text-books for children especially and that they should be made available in time. We have been giving some books for being printed in private presses and that we have done because there have been certain representations from the private presses saying that they have not had work and that they would be able to do it. Now if certain matters and handicaps and defects like these have been noticed, I will assure the Hon'ble Members, Sir, that we will see to it that these are rectified as quickly as possible and to as great an extent as possible.

The other point he mentioned is about the language mistakes. That also will be attended to.

Sir, regarding the Codes Sri Anantaraman was speaking about, we have printed and supplied to the Government Central Depot, Bangalore, for sale during January 1953, 73 Acts and Codes, etc., and these are available in the Government Central Book Depot for sale.

Sri V. VENKATAPPA (Channapatna).—They are not available, Sir. Yesterday I verified. Not even one Code is available.

Dr. R. NAGAN GOWDA.—And I have got a list in here and if there are some which are important and are not found, I will see that they are also printed. We have got a number of other books that are in print right now and I have got a list of them also. These are.........

Sri M. PALANIYAPPAN (Ulsoor).—The letter heads that are being printed and supplied to Members are too costly.

Mr. SPEAKER.—If it is so costly, you need not buy.

Dr. R. NAGAN GOWDA.—If it is the wish of the Hon'ble Members that we should economise on that, that also will be attended to. I am glad the the Hon'ble Member went into it. We have got a number of letter heads which are now being printed and will be made available for sale to Members.

Sri M. LINGANNA (Nanjangud).—I want to know what has happened about the Mysore High Court Digest which was discussed last time and which was promised to be reprinted.

Dr. R. NAGAN GOWDA.—We have got a list here. Then there was another point which Sri Srinivasa Iyengar was mentioning and that was regarding commission agents who are not selling these books. He said that they are not keeping these books in stock. This is a very serious matter. Of course, the commission agents take their commission and if they are not keeping them.........

Sri S. SRINIVASA IYENGAR.—Establish your depots in each district.

Dr. R. NAGAN GOWDA.—Well, that also will be considered. The commission agents, we expect, will be able to do this work properly. If they are not doing it, I think we wlll make some alternative arrangement by which all these books—text books and others—will be made available to the general public who need them.

In general, Sir, I might say here that we have been making earnest efforts to get things printed very promptly. You might have noticed during this Session that we have been able to print within four or five days proceedings of this House and they are being made available to Hon'ble Members also within a week of the proceedings.

Sri M. V. RAMA RAO (Tumkur).—It was only for a few days.

Dr. R. NAGAN GOWDA.—I have noticed that also. I am glad that was mentioned, because the arrangement we have made for getting them printed still holds good. But the arrangement for getting manuscripts corrected is not working satisfactorily. I request the co-operation of all the Hon'ble Members in here in this respect. I want them to correct the manuscripts as soon as they are handed over and return them quickly, so that we will be able to get them printed.

Sri M. V. RAMA RAO.—Regarding the correction of manuscripts, there is another side to it about which I do not wish to say anything.

Dr. R. NAGAN GOWDA.—Then I will still remain in the dark about it, Sir. But I will say that we will try to get them printed if they hand over the corrected manuscripts as quickly as possible.

Sri J. MOHAMED IMAM (Jagalur).—We have not received from the 8th.

Sri M. LINGANNA.—What about the 'HIGH COURT DIGEST'?

Dr. R. NAGAN GOWDA.—I will attend to the 'High Court Digest'.

Generally speaking, Sir, I think the work that has been carried on by the Printing Department is very satisfactory and I hope . . . . .

Mr. SPEAKER.—In this connection, I must mention one point. Some Members instead of making corrections pertaining to grammatical mistakes, it is brought to my notice, substitute speeches altogether.

Sri V. VENKATAPPA.—Sometimes it is impossible to correct these speeches, that is what Sri M. V. Rama Rao says.

Mr. SPEAKER.—Speeches which they had not delivered at all on the floor of the House should not be substituted.

The question is:

"That a sum not exceeding Rs. 22,02,000 be granted to the Government to defray the charges

which will come in course of payment during the year ending 31st day of March 1955, in respect of 'Stationery and Printing'."

The motion was adopted.

---

12 NOON.

DEMAND No. 34—MISCELLANEOUS

57. MISCELLANEOUS

Mr. SPEAKER.—Motion moved :

"That a sum not exceeding Rs. 26,68,100 be granted to the Government to defray the charges which will come in course of payment during the year ending 31st day of March 1955, in respect of 'Miscellaneous'."

*Sri M. PALANIYAPPAN (Ulsoor).—Sir, I have already brought to the notice of the Government that water supply in the Civil Station has been in a very miserable condition. People will have to wait till midnight to get water for their use. Government have given a loan of 70 lakhs to the Corporation. The main intention of my having brought this cut motion is to see that Government direct the Corporation to implement the scheme as early as possible and relieve this distress of water supply.

Sir, round about Civil Station industries are springing up, industries like Telephone Industry, Aircraft and the Motor Industry. On account of this numerous labourers working there are located in that area and the place is becoming more or less a slum area. I request Government to see that these places are converted into beautiful colonies.

Mr. SPEAKER.—You are referring to all the cut motions; that is not permissible.

Sri M. PALANIYAPPAN.—I request Government to consider these two facts, Sir.

Sri S. SRINIVASA IYENGAR (T-Narsipur).—Sir, I oppose Demand No. 34. I want to know why the Government have provided three lakhs on page 136 towards 'Other Items.' They have provided for every possible item under miscellaneous head. In making this provision of three lakhs Government have not given us any details about this item. I very much like to know why this amount is provided for.

While making provision for irrecoverable loans, I would like to say, the policy of Government in collecting dues is not working well. Nearly eight crores are due to Government, four crores from the local bodies and four crores from others, and yet the action taken by Government for recovery of these loans is far from satisfactory and providing for irrecoverable loans under this head cannot be accepted for they have not discharged their duty properly. Sir, loans have been issued to people for starting agricultural farms and co-operative farms, but none of these purposes are fulfilled. Loans are issued for the purchase of manure and they are not recovered. In course of time, if they go on providing for writing off of irrecoverable loans, the Government would naturally lose nearly eight crores of rupees.

Further, Sir, I wanted to know the protection they have provided for against fire accidents in All-India Exhibition. Two years ago there was a fire accident in the All-India Exhibition at Bangalore and a committee was constituted to enquire into the cause of the fire and the committee submitted its report to Government. This time, attempts are being made to run an All-India Exhibition here. I wish to know, in the light of this report, how far Government have taken steps to prevent occurrence of such mishaps in future.

Then I wish to speak a few words about the Dasara Exhibition. Sir, from the accounts it is seen that the income was 1·25 lakhs against an expenditure of 1.20 lakhs and Government received only Rs. 5,000 as net income. If you see the Dasara Exhibition, you will be wondering why Government could not get ten to fifteen lakhs. The rents are so heavy and there is so much of revenue by way of gate money and yet they have got only five thousand rupees. Why I said the revenue must be more is because the stall rate is so

((Sri S. SRINIVASA IYENGAR)

heavy and the crowd that gets into the Exhibition is so large that naturally Government must get more money. I want to know how it is being worked out and why the income is so little from the Exhibition.

Sri P. R. RAMAIYA (Basavangudi).—Sir, I wish to make one or two observations on this demand. The question of Employment Exchange comes under this head. I wish to know from Government what they are going to do with so many employees who are being thrown out from the Food Department. Sir, their case is very hard. They have been working in the department for the last ten years and more. Most of them have reached middle age and all of a sudden to throw these people who are family people is a very hard case and this matter ought to engage the attention of the Government in a very serious manner. Sir, about 100 to 150 people had come to me and represented their grievances and their service in the department. This is a matter which this House ought to take note of. Surely we have to reduce the number of employees, but Government should know the number of people that they are sending out every day and they should also tell us as to what they are going to do with these thrown out employees. I urge that Government should see their way to provide these people with some places and that some new ventures should be undertaken by them to employ these people. I do not want to take more time of this House, but, Sir, this is a very urgent porblem which ought to engage the serious attention of the Government.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಈಗ ಆಹಾರ ಇಲಾಖೆಯನ್ನು ರದ್ದು ಮಾಡುತ್ತಿರುವುದರಿಂದ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಹೆಚ್ಚಾಗಿರುವುದು ನಿಜ. ಆದರೆ ಸರ್ಕಾರಕ್ಕೆ ಈಗ ಪರಿಸ್ಥಿತಿ ಬಹಳ ಕಷ್ಟವಾಗಿ ಕಾಣುತ್ತಿದೆ. ಒಂದು ಕಡೆಯಿಂದ retrenchment ಮಾಡಿ, ಖರ್ಚನ್ನು ಕಡಿಮೆಮಾಡಿಕೊಳ್ಳಿ ಎಂದು ಹೇಳುವುದು, ಮತ್ತೊಂದು ಕಡೆ ವರಮಾನವನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಸರ್ವ ಪ್ರಯತ್ನ ಮಾಡಬೇಕೆಂದು ಹೇಳುವುದು—ಹೀಗೆ ಮಾಡಿದರೆ ಸರ್ಕಾರದವರು ಈ ವಿಚಾರದಲ್ಲಿ ಒಂದು ಖಚಿತ ಮಾರ್ಗವನ್ನು ಅನುಸರಿಸಿಕೊಂಡು ಹೋಗುವುದರಲ್ಲಿ ಕಷ್ಟವಾಗಬಹುದು. ಈಗ ಕೈಗಾರಿಕೆಯ ಪರಿಸ್ಥಿತಿಯನ್ನು ಗಮನಿಸಿದರೆ, ಸರ್ಕಾರದವರು ವಿಧಿಸುವ ಕೆಲವು ಸುಂಕಗಳ ಪರಿಣಾಮವಾಗಿ ತಯಾರಾದ ಪದಾರ್ಥಗಳ ಮಾರಾಟಕ್ಕೆ ಅಡಚಣೆಯಾಗಿ ಕೈಗಾರಿಕೆ ಸುವ್ಯವಸ್ಥಿತ ರೀತಿಯಲ್ಲಿ ನಡೆಯಲು ತೊಂದರೆಯಾಗಿದೆ. ಸರ್ಕಾರದವರು ನಡೆಸುತ್ತಿರುವ ಕೆಲವು ಕೈಗಾರಿಕೆಗಳನ್ನು keep-up ಮಾಡಿಕೊಂಡು ಹೋದರೆ ಸಾಕು ಎಂಬ ಸ್ಥಿತಿಯಲ್ಲವೆ, ಕೆಲವು ಕೈಗಾರಿಕೆಗಳು. ಅವುಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಹೆಚ್ಚು ಬಂಡವಾಳ ಹಾಕಿಕೊಳ್ಳಲು ಸರ್ಕಾರದವರಿಗೆ ಶಕ್ತಿ ಇದೆ. ಅಭಿವೃದ್ಧಿ ಹೊಂದಲು ಶಕ್ತಿಯೇ ಇಲ್ಲದೆ ಕುಂಠಿತವಾಗಿರುವ ಕೆಲವು ಕೈಗಾರಿಕೆಗಳು ಯಾವುವು ಎಂಬುದನ್ನು ಸರ್ಕಾರದವರು ಪರಿಶೀಲಿಸಬೇಕೆಂದು ಸಲಹೆಮಾಡುತ್ತೇನೆ. ಅಲ್ಲದೆ ರೈತರ ಅಭಿವೃದ್ಧಿಗೆ ಮುಖ್ಯ ಸಾಧಕವಾದ ಕಂಪೋಸ್ಟ್ ಸ್ಕೀಂ ವಿಚಾರದಲ್ಲಿ ಇಲಾಖೆಯವರು ಶ್ರದ್ಧೆವಹಿಸಿ, ಅವುಗಳಿಗೆ ಏನೇನು ಸಾಮಗ್ರಿಗಳನ್ನು ಸೇರಿಸಿದರೆ ಹೆಚ್ಚು ಲಾಭದಾಯಕವಾದ ಗೊಬ್ಬರವನ್ನು ಒದಗಿಸಿಕೊಳ್ಳಬಹುದು ಎಂಬ ಬಗ್ಗೆ ರೈತರಿಗೆ ತಿಳಿವಳಿಕೆ ಕೊಡಬೇಕು. Artificial Manure ಎಂಬುದನ್ನು ಸಾಮಾನ್ಯವಾಗಿ ಎಲ್ಲ ರೈತರೂ ಕೊಂಡುಕೊಳ್ಳುವುದಕ್ಕೆ ಅಗುವುದಿಲ್ಲ. ಏಕೆಂದರೆ, ಅದಕ್ಕಾಗಿ ಅವರು ನೂರಾರು ರೂಪಾಯಿಗಳ ಖರ್ಚು ವಹಿಸಬೇಕು. ಆದುದರಿಂದ ಈ ಸಣ್ಣಪುಟ್ಟ ರೈತರಿಗೆ ಅನುಕೂಲವಾಗುವಂತೆ ಈ ಅಗ್ರಿಕಲ್ಚರ್ ಕಂಪೋಸ್ಟ್ ಸ್ಕೀಂ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಿ ಇವರಿಗೆಲ್ಲ ಅನುಕೂಲವನ್ನು ಕಲ್ಪಿಸಿ ಕೊಡಬೇಕು. ಇಷ್ಟೇ ಅಲ್ಲದೆ ನಮ್ಮ ಸಂಸ್ಥಾನದಲ್ಲಿ ಸಣ್ಣಪುಟ್ಟ ಕೈಗಾರಿಕೆಗಳು ಯಾವ ಯಾವುವು, ಅವುಗಳು ಹೇಗೆ ಅಭಿವೃದ್ಧಿಗೊಳ್ಳಬೇಕಾಗಿದೆ ಎಂಬುದನ್ನು ಪರಿಶೀಲಿಸಿ ಕೇವಲ ಬಡಜನರ ಜೀವನಕ್ಕೆ ಸಾಧಕವಾದ ಕೈಗಾರಿಕಾಭಿವೃದ್ಧಿಗೆ ಸರ್ಕಾರ ಗಮನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

Mr. SPEAKER.—No reply.

Sri K. PRABHAKAR.—We want to hear the reply.

Mr. SPEAKER.—No reply. I will now put the demand to the vote of the House. The question is:

> "That a sum not exceeding Rs. 26,68,100 be granted to the Government to defray the charges which will come in course of payment during the year ending 31st day of March 1955, in respect of 'Miscellaneous'."

The motion was adopted.

DEMAND No. 35A—COMMUNITY DEVELOPMENT

63B.—COMMUNITY DEVELOPMENT PROJECTS.

Mr. SPEAKER.—Motion moved:

> "That a sum not exceeding Rs. 22,11,000 be granted to the Government to defray the charges

which will come in course of payment during the year ending 31st day of March 1955, in respect of 'Community Development Projects'."

*ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ ವಿಚಾರದಲ್ಲಿ ಮೈಸೂರು ಸಂಸ್ಥಾನದಲ್ಲಿ ಎಷ್ಟು ತೀವ್ರವಾದ ಕೆಲಸ ನಡೆದಿದೆಯೆಂಬುದನ್ನು ಪರಿಶೀಲಿಸಬೇಕಾದುದು ಅಗತ್ಯ. ಇದಕ್ಕಾಗಿ ಹಣವನ್ನೇನೋ ಯಥೇಚ್ಛವಾಗಿ ಒದಗಿಸಿಕೊಂಡು ಇದಕ್ಕೆ ಸಂಬಂಧಿಸಿದ ಹಾಗೆ ಹಲವಾರು ಐಟಂಗಳನ್ನು ನಮೂದಿಸಿರುತ್ತಾರೆ. ಆದರೆ ಕಮ್ಯೂನಿಟಿ ಪ್ರಾಜೆಕ್ಟ್ ವಿಚಾರದಲ್ಲಿ ನಮ್ಮ ಸಂಸ್ಥಾನದಲ್ಲಿ ಕೆಲಸ ಅಷ್ಟು ತೀವ್ರವಾಗಿ ನಡೆದಿಲ್ಲವೆಂದು ಹೇಳಿದರೆ ಮಾನ್ಯ ಮಿತ್ರರು ಒಪ್ಪುತ್ತಾರೆಂದು ತಿಳಿದಿದ್ದೇನೆ. ಈ ಬಗ್ಗೆ ಕೆಲಸ ಏನು ನಡೆದಿದೆಯೆಂಬುದನ್ನು ಪೆಪ್ಸು ಸಂಸ್ಥಾನದಲ್ಲಿ ನಡೆದಿರುವ ಕೆಲಸದೊಂದಿಗೆ ಹೋಲಿಸಿ ನೋಡಿದರೆ ಅಲ್ಲಿ ಬಹಳ ತೀವ್ರತೆಯಿಂದ ಕೆಲಸ ನಡೆದಿದೆಯೆಂಬುದು ವ್ಯಕ್ತವಾಗುತ್ತದೆ. ಮೈಸೂರು ಸಂಸ್ಥಾನದಲ್ಲಿ ಈ compost ಗುಂಡಿಗಳನ್ನು ತೆಗೆಯತಕ್ಕ ಬಗ್ಗೆ 1952ರಲ್ಲಿ 124 ಮಾತ್ರ ತೆರೆದಿರುತ್ತಾರೆ. ಅದೇ Pepsu ಸಂಸ್ಥಾನದಲ್ಲಿ 2,793 compost ಗುಂಡಿಗಳನ್ನು ತೆರೆದಿರುತ್ತಾರೆ. Distress Relief ಕಾರ್ಯ ಹಂಚಿಕೆಯ ಪ್ರಕಾರ fertilisersನ್ನು ಕಮ್ಯೂನಿಟಿ ಪ್ರಾಜೆಕ್ಟ್ ಅಂಗವಾಗಿ 592 ಮನೆಗಳಿಗೆ ಹಂಚಿರುತ್ತಾರೆ, ಅದೇ ಪೆಪ್ಸುವಿನಲ್ಲಿ 3,134 ಮನೆಗಳಿಗೆ ಹಂಚಿರುತ್ತಾರೆ. ಇದೇ ರೀತಿ Seeds—ಬೀಜವರಿಯನ್ನು—ನಮ್ಮ ಸಂಸ್ಥಾನದಲ್ಲಿ 916ರಷ್ಟು ಹಂಚಿರುತ್ತಾರೆ. ಅದೇ ಪೆಪ್ಸುವಿನಲ್ಲಿ 1,960 ರಷ್ಟು ಹಂಚಿರುತ್ತಾರೆ. ಇಂಪ್ಲಿಮೆಂಟ್ಸ್—ವ್ಯವಸಾಯಗಾರರಿಗೆ ಅವಶ್ಯಕವಾದ ಸಲಕರಣೆಗಳನ್ನು 34 ಮಂದಿಗೆ ನಮ್ಮ ಸಂಸ್ಥಾನದಲ್ಲಿ ಹಂಚಿರುತ್ತಾರೆ. ಅದೇ ಪೆಪ್ಸುವಿನಲ್ಲಿ 300 ಮಂದಿಗೆ ಹಂಚಿರುತ್ತಾರೆ. Reclamation ವಿಚಾರದಲ್ಲಿ ಭೂಮಿಯನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡತಕ್ಕ ವಿಧಾನದಲ್ಲಿಯೂ ಸಹ ನಮ್ಮ ಸಂಸ್ಥಾನ ಪೆಪ್ಸು ಸಂಸ್ಥಾನಕ್ಕಿಂತಲೂ ಹಿಂದುಳಿದಿದೆ. ಅಲ್ಲಿ ಅಕ್ಟೋಬರ್ 52ರಿಂದ ಅಕ್ಟೋಬರ್ 53ರ ವರೆಗೆ 1,715 ಎಕರೆಯಷ್ಟು reclamation ಮಾಡಿರುತ್ತಾರೆ ಅದೇ ನಮ್ಮ ಸಂಸ್ಥಾನದಲ್ಲಿ 90 ಎಕರೆಯಷ್ಟು ಮಾಡಿರುತ್ತಾರೆ. Irrigation ವಿಚಾರದಲ್ಲಿಯೂ ಸಹ ಎರಡು ಸಂಸ್ಥಾನಗಳ ಅಂಕಿ ಅಂಶಗಳನ್ನೂ ಹೋಲಿಕೆ ಮಾಡಿ ನೋಡಿದರೆ ವ್ಯಸನವಾಗುತ್ತದೆ. ನಮ್ಮ ಸಂಸ್ಥಾನದಲ್ಲಿ 911 ಎಕರೆಯಷ್ಟನ್ನು ವ್ಯವಸಾಯಕ್ಕೆ ಯೋಗ್ಯವಾದ ರೀತಿಯಲ್ಲಿ ಮಾಡಿದೆ. ಪೆಪ್ಸುವಿನಲ್ಲಿ 4,245 ಎಕರೆಯಷ್ಟು ವ್ಯವಸಾಯಕ್ಕೆ ಯೋಗ್ಯವಾಗಿದೆ.

Mr. SPEAKER.—May I know how many community projects there are?

Sri M. LINGANNA.—Only one. There are the figures from October 1952 to end of June 1953.

Mr. SPEAKER.—How are you able to get at them?

Sri M. LINGANNA.—I have compiled from the books available. ಈ ಕಮ್ಯೂನಿಟಿ ಪ್ರಾಜೆಕ್ಟ್ ಕೆಲಸದಲ್ಲಿ ಜನರ labour ಮೂಲಕ ಪೆಪ್ಸು ಸಂಸ್ಥಾನದಲ್ಲಿ 244 ಸಾವಿರ ರೂಪಾಯಿಗಳನ್ನು ಶೇಖರಿಸಿರುತ್ತಾರೆ. ನಮ್ಮವರು 129 ಸಾವಿರ ರೂಪಾಯಿಗಳನ್ನು ಜನರ labour ಮೂಲಕ ಶೇಖರಿಸಿರುತ್ತಾರೆ. ಇದನ್ನು ನೋಡಿದರೆ ಈ ಕಮ್ಯೂನಿಟಿ ಪ್ರಾಜೆಕ್ಟ್ ಯಾವ ಉದ್ದೇಶದಿಂದ ಸೆಂಟ್ರಲ್ ಪ್ಲಾನಿಂಗ್ ಕಮಿಷನ್‌ನವರು ದೇಶಾದ್ಯಂತ ಜಾರಿಗೆ ತಂದಿರುತ್ತಾರೆಯೋ ಅದು ನಮ್ಮ ಸಂಸ್ಥಾನದಲ್ಲಿ ಸಫಲವಾಗಿಲ್ಲವೆಂದು ಭಾವಿಸುತ್ತೇನೆ. ಇದಕ್ಕೆ ಅನೇಕ ಕಾರಣಗಳನ್ನು ಮಾನ್ಯ ಮಂತ್ರಿಗಳು ಹೇಳಬಹುದು. ಆದರೂ ಈ ಸಾಮುದಾಯಿಕ ಯೋಜನೆಯನ್ನು ಕೈಗೊಳ್ಳುವುದರಲ್ಲಿ ನಮ್ಮ ಸಂಸ್ಥಾನದಲ್ಲಿ ಒಂದು ನಿರ್ದಿಷ್ಟವಾದ ಕಾರ್ಯಕ್ರಮದಮೇಲೆ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿಲ್ಲವೆಂದರೆ ಅದನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೆಂದು ನಾನು ನಂಬಿದ್ದೇನೆ.

ಈ ಕೆಲಸವನ್ನು ತೀವ್ರವಾಗಿ ಮಾಡಬೇಡಿ, ಕೈಬಿಡಿ ಎಂದು ಹೇಳುವ ಪರಿಸ್ಥಿತಿಯಲ್ಲಿ ನಾನು ಇಲ್ಲ. ಅಮೆರಿಕಾ ದೇಶದವರಿಂದ ಬಂದಿರತಕ್ಕ ಒಂದು ಯೋಜನೆಯನ್ನು ನಾವು ಅಳವಡಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದೇವೆ ಎನ್ನುವ ಒಂದು ಅಭಿಪ್ರಾಯ ಇದೆ. ಈ ಕಮ್ಯೂನಿಟಿ ಪ್ರಾಜೆಕ್ಟ್ ಮೈಸೂರಿಗೆ ಹೊಸದೇನೂ ಅಲ್ಲ. ಅನೇಕ ವರ್ಷಗಳಿಂದ ರೂರಲ್ ಡೆವಲಪ್‌ಮೆಂಟ್ ಮಾಡಿಕೊಂಡು ಬಂದಿದ್ದೇವೆ. ಇಷ್ಟೆಲ್ಲಾ ಇದ್ದರೂ ಕೂಡ ನಮ್ಮ ದೇಶ ಹಿಂದೆ ಬಿದ್ದಿರುವುದಕ್ಕೆ ಕಾರಣವೇನೆಂಬುದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು. ಕಮ್ಯೂನಿಟಿ ಪ್ರಾಜೆಕ್ಟ್ ಆಗಲಿ ಯಾವುದೇ ಆಗಲಿ ಸಂಪೂರ್ಣವಾಗಿ ನಂಬಿಕೆ ಇಲ್ಲದೆ ಇದ್ದರೆ ಕೈಬಿಟ್ಟು ಬಿಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ನಂಬಿಕೆ ಇದ್ದ ಪಕ್ಷದಲ್ಲಿ ಅದನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು. ಅದರಿಂದ ಆಗತಕ್ಕ ಅನುಕೂಲವನ್ನು ಜನಗಳಿಗೆ ಕಲ್ಪಿಸಿಕೊಡಬೇಕು. ಇಲ್ಲದೇ ಹೋದರೆ ಅದನ್ನು ಇಟ್ಟುಕೊಂಡು ತಪ್ಪು ಮಾಡಿದ ಹಾಗಾಗುತ್ತದೆ. ಕೆಲಸ ಮಾಡುವುದಾದರೆ ಮಾಡೋಣ; ಅನುಕೂಲವಾಗುವುದಿಲ್ಲ. ರೂರಲ್ ಡೆವಲಪ್‌ಮೆಂಟ್ ವರ್ಕ್ ಹಿಂದೆ ಇದ್ದಂತೆ ಮಾಡೋಣ ಎಂಬ ಅಭಿಪ್ರಾಯ ಇದ್ದರೆ ಅದನ್ನೇ ಮುಂದುವರಿಸಿಕೊಂಡು ಹೋಗೋಣ. ಅಂತು ಯಾವುದಾದರೂ ಒಂದು ನಿರ್ದಿಷ್ಟವಾದ ಅಭಿಪ್ರಾಯವುಳ್ಳವರಾಗಿ ಕೆಲಸ ಮಾಡುವುದು ಒಳ್ಳೆಯದು. ಕಮ್ಯೂನಿಟಿ ಪ್ರಾಜೆಕ್ಟ್ ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ ಇವನ್ನೆಲ್ಲಾ ಇಟ್ಟುಕೊಂಡಿದ್ದೀರಿ. ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂನಲ್ಲಿ ಈಗ 7 ಬ್ಲಾಕ್ಸ್ ತೆಗೆದುಕೊಂಡಿದ್ದೀರಿ. 54-55 ಕ್ಕೆ 8 ಬ್ಲಾಕ್ಸ್ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯ ಇದೆ ಎಂದು ಹೇಳಿದ್ದೀರಿ. ಈಗಾಗಲೇ ಪ್ರಾರಂಭ ಮಾಡಿರತಕ್ಕ ಬ್ಲಾಕುಗಳಲ್ಲಿ ನಡೆಸಿರತಕ್ಕ ಕೆಲಸಕಾರ್ಯಗಳು ಸಫಲವಾಗಲಿ ಎಂಬುದೇ ನನ್ನ ಅಭಿಪ್ರಾಯ. ಮುಂದೆ 8 ಬ್ಲಾಕುಗಳನ್ನು ಸೆಲೆಕ್ಟ್ ಮಾಡುವಾಗಲೂ ಕೂಡ ಲೋಕಲ್ ಆಫೀಸರುಗಳು ಮತ್ತು ಡೆಪ್ಯೂಟಿ ಕಮೀಷನರು ಆ ಒಂದು ಅಭಿಪ್ರಾಯವನ್ನೇ ಮುಂದಿಟ್ಟುಕೊಂಡು ಬ್ಲಾಕ್ಸ್ ಸೆಲೆಕ್ಟ್ ಮಾಡಬೇಕೆಂಬುದೇ ನನ್ನ ಆಶೆ. ಇದನ್ನು ತಮ್ಮ ಅವಗಾಹನೆಗೆ ತಂದಿದ್ದೇನೆ.

Dr. R. NAGAN GOWDA (Minister for Agriculture).—Mr. Speaker, Sir, the Hon'ble Member who has spoken on the Community Projects and also on the National Extension Service has said that by comparison with another State, our work has not progressed as rapidly as it should have. There is some truth in

(DR. R. NAGAN GOWDA.)

the matter and that is not exactly due completely to any neglect on the part of us here, but it was due to the fact that we got our estimates and things like that passed in the middle of the year 1953 and so much work could not de done, *i.e.,* as much as we expected. But in a venture like this wherein large amount of co-operation from the local people is required, it requires some time to make a start and gain momentum. But when once it has gained momentum, it will go on much more rapidly than we might see at the start; and I can assure the Hon'ble Members here that we expect rather rapid and considerable progress in the next few months. There is a particular point here in the area where we have taken the community projects; last year heavy monsoon rains did not allow of any work being done and this year we are planning to carry out the work rapidly before the monsoon starts.

In a nutshell I am willing to give the amount of work we have got on hand. We have at present about 63 estimates covering over Rs. 3,72,000 for restoration of tanks; we have got estimates ready for 64 tanks for repairs. In this connection, I would like to mention that we have on the spot working indeed about 21 Sub-Overseers and 2 Assistant Engineers. We have taken up the restoration and repairs of tanks and also we have had estimates prepared for pukka and *kachha* roads immediately and we have 66 estimates for new wells and before long we will have estimates ready for 100 wells. We have also estimates for repairs of wells and we have a programme for giving a loan of 2¼ lakhs of rupees for manure purposes. We have also arranged to build community entertainment centres in 46 places and we have also a programme of giving on loan up to an amount of Rs. 75,000 for villagers to improve their houses, and we have got to limit these loans only to 300 per each individual. Now the work has gained momentum and is going on at a rapid stride; and I have no hesitation in assuring the Hon'ble Members that before the rains start, we will have repaired a number of tanks and constructed a number of roads and we will also have completed a number of repair works to wells and digging of new wells also.

I would therefore ask the Hon'ble Members to await the next anniversary of the Community Projects Scheme, namely, October 2nd and see the amount of work that has been done.

With this assurance, Sir, I hope Hon'ble Members of the House will pass this demand.

MR. SPEAKER.—The question is:

"That a sum not exceeding Rs. 22,11,000 be granted to the Government to defray the charges which will come in course of payment during the year ending 31st day of March 1955, in respect of 'Community Development Projects'."

The motion was adopted.

MR. SPEAKER.—The question is:

"That the respective sums not exceeding the amounts shown in the list of Demands for Grants for the year 1954-55 circulated among Members be granted to the Government to defray the charges which will come in course of payment during the year ending 31st day of March 1955, in respect of Demands Nos. 31, 32, 32A, 35, 35B and 43A."

The motion was adopted.

[As directed by the Speaker, the motions for demands adopted by the House are reproduced below.]

DEMAND No. 31—POLITICAL PENSIONS.

54A. TERRITORIAL AND POLITICAL PENSIONS.

"That a sum not exceeding Rs. 2,78,000 be granted to the Government to defray the charges which will come in course of payment during the year ending 31st day of March 1955, in respect of 'Territorial and Political Pensions'."

DEMAND No. 32—SUPERANNUATION ALLOWANCES AND PENSIONS.

55. SUPERANNUATION ALLOWANCES AND PENSIONS.

" That a sum not exceeding Rs. 64,07,500 be granted to the Government to defray the charges which will come in course of payment during the year ending 31st day of March 1955, in respect of 'Superannuation Allowances and Pensions'."

DEMAND No. 32A—COMMUTATION OF PENSIONS.

55A. COMMUTATION OF PENSIONS FINANCED FROM ORDINARY REVENUE.

" That a sum not exceeding Rs. 2,45,000 be granted to the Government to defray the charges which will come in course of payment during the year ending 31st day of March 1955, in respect of 'Commutation of Pensions'."

DEMAND No. 35—EXTRAORDINARY CHARGES.

63. EXTRAORDINARY CHARGES.

" That a sum not exceeding Rs. 25,00,000 be granted to the Government to defray the charges which will come in course of payment during the year ending 31st day of March 1955, in respect of 'Extraordinary Charges'."

DEMAND No. 35B—COMPENSATION TO ZAMINDARS.

65. PAYMENT OF COMPENSATION TO LAND-HOLDERS ON THE ABOLITION OF THE ZAMINDARI SYSTEM.

" That a sum of Rs. 10,000 be granted to the Government to defray the charges which will come in course of payment during the year ending 31st day of March 1955, in respect of 'Payment of Compensation to Land-holders on the abolition of the Zamindari System'."

DEMAND No. 43A—COMMUTATION VALUE OF PENSIONS.

83. PAYMENT OF COMMUTED VALUE OF PENSIONS.

" That a sum not exceeding Rs. 100 be granted to the Government to defray the charges which will come in course of payment during the year ending 31st day of March 1955, in respect of 'Commutation Value of Pensions'."

Mr. SPEAKER.—The House will now rise for the day and meet on Monday at 12 NOON.

The House adjourned at Thirty Minutes past Twelve of the Clock to meet again on Monday, the 29th March 1954 at Twelve of the Clock.